ವಿಜಯಪುರ | ಸಂಪುಟ 01 | ಸಂಚಿಕೆ 241 | ಪುಟ 4 | ₹ 3.00
https://udayarashminews.com
udayarashmi 7026028778

# ಉದಯರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶುಕ್ರವಾರ, ನವೆಂಬರ್ 17, 2023

“ಗೋವು ಐಶ್ವರ್ಯ ಮತ್ತು ಮೋಕ್ಷದ ಪ್ರತೀಕವಾಗಿದೆ. ಗೋವಿನ ಪೂಜೆ ಅನಾದಿಕಾಲದಿಂದಲೂ ನಮ್ಮ ದೇಶದಲ್ಲಿ ಮಾಡುತ್ತಾ ಬಂದಿದ್ದಾರೆ. ಅವು ಸಮೃದ್ಧಿಯ ಸಂಕೇತ. ಗೋವುಗಳನ್ನ ಸಾಕುವ ಪರಂಪರೆ ಮುಂದುವರೆಯಬೇಕು.”

ಉದಯರಶ್ಮಿ ದಿನಪತ್ರಿಕೆ



– ಅಶೋಕ ಮನಗೂಳಿ
ಶಾಸಕರು, ಸಿಂದಗಿ

ವಿಜಯೇಂದ್ರ ನೇಮಕಕ್ಕೆ ಅಸಮಾಧಾನ । ಹೈಕಮಾಂಡ್ ವಿರುದ್ಧ ಶಕ್ತಿ ಪ್ರದರ್ಶನಕ್ಕೆ ನಿರ್ಧಾರ । ಶೀಘ್ರವೇ ಬೆಂಬಲಿಗರ ಸಭೆ

# ಕಾಂಗ್ರೆಸ್‌ನತ್ತ ವಿ.ಸೋಮಣ್ಣ ಚಿತ್ತ!

ಬೆಂಗಳೂರು: ನೂತನ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರನ್ನ ಬಿಜೆಪಿ ಹೈಕಮಾಂಡ್ ನೇಮಕ ಮಾಡಿದ್ದು, ಬಿಜೆಪಿ ಹಿರಿಯ ನಾಯಕ ವಿ ಸೋಮಣ್ಣ ಅವರ ಅಸಮಾಧಾನಕ್ಕೆ ಕಾರಣವಾಗಿದ್ದು, ಪಕ್ಷ ಬಿಡಲು ವಿ ಸೋಮಣ್ಣ ಮುಂದಾಗಿದ್ದಾರೆ.

ಹೌದು, ಬಿಜೆಪಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಬಿಜೆಪಿ ನಾಯಕ ವಿ.ಸೋಮಣ್ಣ ಅವರು ಸದ್ಯವೇ ಗೋವಿಂದರಾಜನಗರ ಕ್ಷೇತ್ರದ ತಮ್ಮ ಬೆಂಬಲಿಗರ ಸಭೆ ಕರೆದು ಮುಂದಿನ ನಡೆಯನ್ನು ತೀರ್ಮಾನಿಸಲಿದ್ದಾರೆ ಎಂದು ಹೇಳಲಾಗಿದೆ.



ವಿಧಾನಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲು ಕಂಡ ವಿ ಸೋಮಣ್ಣ ಅವರು, ನಮ್ಮ ಪಕ್ಷದವರೇ ನನ್ನ ಸೋಲಿಸಲು ಕೆಲಸ ಮಾಡಿದ್ದಾರೆ ಎಂದು ಬಹಿರಂಗವಾಗಿ ಅಸಮಾಧಾನವನ್ನ ಹೊರಹಾಕಿದ್ದು, ಇದೀಗ ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಹುದ್ದೆ ನೀಡಿರುವುದು ಇನ್ನಷ್ಟು ಬೇಸರಕ್ಕೆ ಕಾರಣವಾಗಿದೆ.

ಅಲ್ಲದೇ ಬಿಜೆಪಿ ಕೆಲ ನಾಯಕರೊಂದಿಗೆ ಮುನಿಸಿಕೊಂಡಿರುವ ವಿ ಸೋಮಣ್ಣ ಬಿಜೆಪಿ ಹೈಕಮಾಂಡ್ ವಿರುದ್ಧ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಇನ್ನೂ ಕಾಂಗ್ರೆಸ್ ಸೇರ್ಪಡೆ ಕುರಿತು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ ಕೆ ಶಿವಕುಮಾರ್ ಜೊತೆಗೆ ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿದ್ದು, ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ. ಸದ್ಯದಲ್ಲೇ ಗೋವಿಂದರಾಜನಗರ ಕ್ಷೇತ್ರದ ತಮ್ಮ ಬೆಂಬಲಿಗರ ಜೊತೆ ಸಭೆ ಕರೆದು ಮುಂದಿನ ನಡೆಯನ್ನು ಮಾಜಿ ಸಚಿವ ವಿ ಸೋಮಣ್ಣ ಅವರು ತೀರ್ಮಾನಿಸಲಿದ್ದಾರೆ. ಅಲ್ಲದೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೂ ಮುನ್ನ ಡಿಸೆಂಬರ್ 6ರಂದು ತುಮಕೂರಿನಲ್ಲಿ ರಾಜಕೀಯ ಶಕ್ತಿ ಪ್ರದರ್ಶನ ಮಾಡಿ ಹೈಕಮಾಂಡ್‌ಗೆ ಸಂದೇಶ ರವಾನಿಸಲು ವಿ ಸೋಮಣ್ಣ ಸಜ್ಜಾಗಿದ್ದಾರೆ ಎನ್ನಲಾಗಿದೆ.

### ಲೋಕಸಭೆಗೆ ಸ್ಪರ್ಧಿಸುವ ಬಯಕೆ

ಕಾಂಗ್ರೆಸ್ ಪಕ್ಷದಿಂದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ಅಥವಾ ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಬಯಕೆ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅಲ್ಲದೇ ಕಾಂಗ್ರೆಸ್ ನಾಯಕರು ಸಹ ಬೆಂಗಳೂರು-ದಕ್ಷಿಣ ಲೋಕಸಭೆಯನ್ನು ಬಲಪಡಿಸಲು ವಿ ಸೋಮಣ್ಣ ಅವರನ್ನು ನಿಯೋಜಿಸಲು ಪ್ಲಾನ್ ಹಾಕಿಕೊಂಡಿದ್ದಾರೆ ಎನ್ನಲಾಗಿದೆ.

ಇನ್ನು ಹಳೇ ಮೈಸೂರು ಭಾಗದಲ್ಲಿ ವೀರಶೈವ ಲಿಂಗಾಯತ ನಾಯಕರ ಕೊರತೆಯನ್ನ ಕಾಂಗ್ರೆಸ್ ಎದುರಿಸುತ್ತಿದ್ದು, ವಿ.ಸೋಮಣ್ಣ ಅವರನ್ನು ಪಕ್ಷಕ್ಕೆ ಕರೆತರುವ ಮೂಲಕ ತುಮಕೂರು ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್ ನಾಯಕರು ಚಿಂತನೆ ನಡೆಸಿದ್ದಾರೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡಗೆ ಟಿಕೆಟ್ ನೀಡುವ ಸಾಧ್ಯತೆಗಳಿವೆ. ಅಲ್ಲದೇ ಮೈತ್ರಿ ಲೆಕ್ಕಾಚಾರದಲ್ಲಿ ಜೆಡಿಎಸ್‌ಗೆ ಕ್ಷೇತ್ರದಿಂದ ಒಕ್ಕಲಿಗರನ್ನ ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಾಗಿದ್ದು, ಮೈತ್ರಿ ಅಭ್ಯರ್ಥಿ ವಿರುದ್ಧವಾಗಿ ವಿ ಸೋಮಣ್ಣ ಅವರನ್ನ ಕಣಕ್ಕಿಳಿಸಲು ಕಾಂಗ್ರೆಸ್ ಲೆಕ್ಕಾಚಾರವನ್ನು ಹಾಕಿಕೊಂಡಿದೆ ಎನ್ನಲಾಗಿದೆ.7

ಸೌಜನ್ಯ: oneindia

ಜಿಲ್ಲಾ ಉಸ್ತುವಾರಿ ಸಚಿವರಿಂದ ಬರಪೀಡಿತ ಪ್ರದೇಶಗಳ ವೀಕ್ಷಣೆ–ಪರಿಶೀಲನೆ

# ಇಂಡಿ ಭಾಗದ 7ಸಾವಿರ ಹೆಕ್ಟೇರ್ ಲಿಂಬೆ ಬೆಳೆಹಾನಿ ಪರಿಹಾರಕ್ಕೆ ಕ್ರಮ

**ಉದಯರಶ್ಮಿ ನ್ಯೂಸ್**

ವಿಜಯಪುರ: ಬೃಹತ್ ಮತ್ತು ಮದ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ ಪಾಟೀಲ ಅವರು ಜಿಲ್ಲೆಯ ಬರಪೀಡಿತ ತಾಲೂಕು ವಿಜಯಪುರ, ಇಂಡಿ, ಚಡಚಣ, ದೇವರ ಹಿಪ್ಪರಗಿ, ಮುದ್ದೇಬಿಹಾಳ ಹಾಗೂ ಬಸವನ ಬಾಗೇವಾಡಿ ತಾಲೂಕಿನ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಬರ ನಿರ್ವಹಣೆ ಕುರಿತು ಪರಿಶೀಲನೆ ಹಾಗೂ ಜನ- ಜಾನುವಾರು, ಕುಡಿಯುವ ನೀರು, ಮೇವಿನ ಪರಿಸ್ಥಿತಿ, ನರೇಗಾ ಯೋಜನೆ ಕಾಮಗಾರಿ, ಗ್ರಾಮೀಣ ಪ್ರದೇಶದವರಿಗೆ ಉದ್ಯೋಗ ಸೃಜನೆ ಸೇರಿದಂತೆ ಜಿಲ್ಲೆಯ ಬರ ಪರಿಸ್ಥಿತಿ ಕುರಿತು ವೀಕ್ಷಣೆ ಮಾಡಿ ಪರಿಶೀಲನೆ ನಡೆಸಿದರು.

ರೇವಣಸಿದ್ದೇಶ್ವರ ಏತ ನೀರಾವರಿ ಕಾಮಗಾರಿಯ ಮುಳವಾಡ ಎರಡನೇ ಹಂತದ ಏತ ನೀರಾವರಿ ಕಾಮಗಾರಿಯ ತಿಡಗುಂದಿ ಹತ್ತಿರವಿರುವ 48ಕಿ.ಮಿ. ಪ್ರಗತಿಯಲಿರುವ ಜಾಕ್‌ವೆಲ್ ಕಾಮಗಾರಿಯನ್ನು ವೀಕ್ಷಣೆ ಮಾಡಿ ಜಾಕ್‌ವೆಲ್‌ನಿಂದ 19 ಕೆರೆಗಳು ತುಂಬಿ ಹೊರ್ತಿ, ಇಂಚಗೇರಿ, ಜಿಗಜಿವಣಿ, ಗುಂದವಾನ, ಸಾತಲಗಾಂವ್ ಹಾಗೂ ಸುತ್ತಮುತ್ತಲಿನ ಸುಮಾರು 50 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

18 ತಿಂಗಳೊಳಗೆ ಕಾಮಗಾ-ರಿಯನ್ನು ಪೂರ್ಣಗೊಳಿಸಲು ಕಾಲಾವಕಾಶವಿದ್ದು ಅವಧಿ ಪೂರ್ವ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು.



ಈ ಭಾಗದಲ್ಲಿ ಕುಡಿಯುವ ನೀರಿನ ತೊಂದರೆಯಿದ್ದು, ಈ ಕಾಮಗಾರಿ ಪೂರ್ಣವಾದ ನಂತರ ಈ ಭಾಗದ 19 ಕೆರೆಗಳು ತುಂಬಿ ಹೊರ್ತಿ, ಇಂಚಗೇರಿ, ಜಿಗಜಿವಣಿ, ಗುಂದವಾನ, ಸಾತಲಗಾಂವ್, ಕೆರೂರ, ದೇವರ ನಿಂಬರಗಿ ಸೇ-ರಿದಂತೆ ಸುತ್ತಮುತ್ತಲಿನ ಸುಮಾರು 50 ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಹಾಗೂ 28 ಸಾವಿರ ಹೆಕ್ಟೇರ ಪ್ರದೇಶ ಭೂಮಿ ನೀರಾವರಿ ಒಳಪಡಲಿದೆ ಜೊತೆಗೆ ಅಂತರ್ಜಲ ಮಟ್ಟ ಕೂಡ ಹೆಚ್ಚಾಗಲಿದ್ದು ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಗಿರಿಮಲ್ಲಪ್ಪ ಚಂದ್ರಕಾಂತ ಇವರು 1 ಎಕರೆ 4 ಗುಂಟೆ ಜಮೀನಿನಲ್ಲಿ ಬೆಳೆದ ಲಿಂಬೆ ಬೆಳೆ ಹಾನಿ ವೀಕ್ಷಣೆ ನಡೆಸಿ, ಈ ಭಾಗದಲ್ಲಿ 7ಸಾವಿರ ಹೆಕ್ಟೆರ್ ಲಿಂಬೆ ಬೆಳೆ ಹಾನಿಯಾಗಿದ್ದು, ಸೂಕ್ತ ಪರಿಹಾರ ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಚಡಚಣ ತಾಲೂಕಿನ ಇಂಚಗೇರಿ ಗ್ರಾಮದ ಬೀರಪ್ಪ ಅರವತ್ತಿ ಅವರ ಬೆಳೆದ ತೊಗರಿ ಬೆಳೆ ಜಮೀನಿಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ತೊಗರಿ ಬೆಳೆ ಹಾನಿಯಾದ ಮಾಹಿತಿಯನ್ನು ಅಧಿಕಾರಿಗಳಿಂದ ಪಡೆದುಕೊಂಡರು. ಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಿ ಪರಿಹಾರ ನೀಡಲು ಸೂಚಿಸಿದರು.

ಹೊರ್ತಿ ಗ್ರಾಮದ ಭೀಮಾಶಂಕರ ಬಾಹುರಾಯ ಪೂಜಾರಿ ಕಬ್ಬು ಬೆಳೆ ಹಾನಿ ಹಾಗೂ ಸಾವಳಸಂಗ ನರೆಗಾ ಯೋಜನೆಯಡಿ ಕಾಮಗಾರಿ ಪರಿಶೀಲನೆ ನಡೆಸಿದರು ಮತ್ತು ಸಾವಳಸಂಗ ಅರಣ್ಯ ಪ್ರದೇಶದಲ್ಲಿ ಸಸಿ ನೆಟ್ಟರು. ಅದೇ ಗ್ರಾಮದ ಶ್ರೀಮತಿ ನೀಲವ್ವ ರೇವಗೊಂಡ ಪಾಟೀಲ ಇವರು ಬೆಳೆದಿರುವ ಸೂರ್ಯಕಾಂತಿ ಬೆಳೆ ಮಳೆ ಇಲ್ಲದೆ ಒಣಗಿರುವುದನ್ನು ವೀಕ್ಷಣೆ ಮಾಡಿದರು.


ಇಂಡಿ ತಾಲೂಕಿನ ಹಂಜಗಿ ಕೆರೆ ವೀಕ್ಷಣೆ ಮಾಡಿದರು. ಹಂಜಗಿಯಿಂದ ಆಗಮಿಸಿದ ಸಚಿವರು ತಾಂಬಾದಲ್ಲಿ ರೈತರಿಗೆ ಮೇವಿನ ಕಿಟ್ಟನ್ನು ವಿತ-ರಿಸಿದರು. ಕೊಣ್ಣೂರಿನಲ್ಲಿ ತೊಗರಿ ಬೆಳೆ, ಹೂವಿನ ಹಿಪ್ಪರಗಿಯಲ್ಲಿ ಕಬ್ಬು ಹಾಗೂ ಬಸವನ ಬಾಗೇವಾಡಿ ತಾಲೂಕಿನ ಯರನಾಳದಲ್ಲಿ ಈರುಳ್ಳಿ ಬೆಳೆ ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ, ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ, ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಜಿಲ್ಲಾಧಿಕಾರಿ ಟಿ. ಭೂಬಾಲನ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವನೆ, ಇಂಡಿ ಉಪವಿಭಾಗಾಧಿಕಾರಿ ಅಬೀದ ಗದ್ಯಾಳ, ವಿಜಯಪುರ ಉಪವಿಭಾಗಾಧಿಕಾರಿ ಬಸವಣ್ಣೆಪ್ಪ ಕಲಶೆಟ್ಟಿ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ರಾಜ ನುಡಿ

ನೀವು ಗೆದ್ದಾಗಲೂ ಸೋಲುವುದು ಅಹಂಕಾರದ-ಅಂಗಳದಲ್ಲಿದ್ದಾಗ ಆದರೆ ಸೋತಾಗಲೂ ಗೆಲ್ಲುವುದು ಪ್ರೀತಿಯ ಪರಿಧಿಯಲ್ಲಿದ್ದಾಗ ಮಾತ್ರ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 235

*ನಿರಾಳದಲ್ಲಿಯ ಮಹಾಲಿಂಗ*

*ಆಕಾರವಿಲ್ಲ-ನಿರಾಕಾರವಿಲ್ಲ, ಅಡಿಯಿಲ್ಲ-ಅಂತರವಿಲ್ಲ,*
*ಎಡನಿಲ್ಲ-ಬಲನಿಲ್ಲ, ಹಿಂದಿಲ್ಲ-ಮುಂದಿಲ್ಲ, ಒಳಗಿಲ್ಲ-ಹೊರಗಿಲ್ಲ, ಈರೇಳರಲ್ಲಿಲ್ಲ, ಮಧ್ಯದಲ್ಲಿಲ್ಲ.*
*ಮತ್ತೆಲ್ಲಿಹುದು? ಎರಡಳಿದು ಒಂದಿಲ್ಲದೆ ನಿರಾಳದಲ್ಲಿಹುದುಯೆಂದನಯ್ಯ,*
*ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗನಿರ್ಮಾಯಪ್ರಭುವೆ.*

*– ಕಾಡಸಿದ್ದೇಶ್ವರರು*

ಈ ಜಗದ ಚಾಲನಾ ಶಕ್ತಿ ದೇವರ ಇರುವಿಕೆ ಬಗ್ಗೆ ಕಾಡಸಿದ್ದೇಶ್ವರರು ಚಿಂತಿಸುತ್ತಾ. ಅದು ಆಕಾರ ರಹಿತ, ವ್ಯಾಪ್ತಿಗೆ ನಿಲುಕದ ಅನಂತ. ಆಕಾರ ರಹಿತವಾದ ಕಾರಣ ಅದಕ್ಕೆ ಎಡ ಬಲ ಹಿಂದೆ ಮುಂದೆ ಒಳಹೊರಗೆ ಎಂಬುದಿಲ್ಲದ ಶೂನ್ಯ ಭಾವ. ಅದರ ಅರಿವು ನಮಗೆ ಒಡಮೂಡಬೇಕೆಂದರೆ. ಅಂಗಲಿಂಗ ಬೇಧ ಅಳಿದು ಲಿಂಗವೇ ಎಲ್ಲ ಎಂಬ ಭಾವ ಒಡಮೂಡಬೆಕೆಂದಿರುವರು. ದೇವನರಸುವ ದಾರಿ ಸುಗಮಗೊಳಿಸಿದವರು ವಚನಕಾರರು. ಮೌಢ್ಯತೆ ಅಳಿಯಲಿ ವೈಚಾರಿಕತೆ ಬೆಳೆಯಲಿ ಎಂಬುದು ವಚನಕಾರರ ಆಶಯ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ಬರ ಪರಿಸ್ಥಿತಿ ಹಾಗೂ ಬರ ನಿರ್ವಹಣೆ ಕುರಿತ ಸಭೆಯಲ್ಲಿ ಅಧಿಕಾರಿಗಳಿಗೆ ಸಚಿವ ಎಂ.ಬಿ.ಪಾಟೀಲ ಸೂಚನೆ

# ಕುಡಿವ ನೀರಿಗೆ ಸಮಸ್ಯೆಯಾಗದಂತೆ ಕಾರ್ಯನಿರ್ವಹಿಸಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇರುವುದರಿಂದ ಮುಂಬರುವ ದಿನಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಈಗಿನಿಂದಲೇ ಯೋಜನಾಬದ್ಧವಾಗಿ ಕುಡಿಯುವ ನೀರಿಗೆ ವಿಷಯದಲ್ಲಿ ವ್ಯವಸ್ಥಿತವಾಗಿ ಕರ್ತವ್ಯ ನಿರ್ವಹಿಸುವಂತೆ ಬೃಹತ್ ಮತ್ತು ಮದ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರಾದ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಬರ ಪರಿಸ್ಥಿತಿ ಹಾಗೂ ಬರ ನಿರ್ವಹಣೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ಎಲ್ಲ ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ತಾಲೂಕು ಮಟ್ಟದಲ್ಲಿ ಟಾಸ್ಕ ಫೋರ್ಸ್ ಸಮಿತಿ ರಚಿಸಿದ್ದು, ಈ ಸಮಿತಿಯು ಕುಡಿಯುವ ನೀರಿನ ಸಮಸ್ಯೆ ಇದ್ದ ಗ್ರಾಮಗಳಲ್ಲಿ ತುರ್ತಾಗಿ ಟ್ಯಾಂಕರ ಮೂಲಕ ಕುಡಿಯುವ ನೀರು ಪೂರೈಸುವಂತೆಯೂ ಹಾಗೂ ಕುಡಿಯುವ ನೀರಿನ ಅಭಾವದ ಪ್ರಮಾಣವನ್ನು ಆದರಿಸಿ ಅಗತ್ಯವಿದ್ದಲ್ಲಿ ಖಾಸಗಿ ಬೋರವೆಲ್‌ಗಳನ್ನು ಗುರುತಿಸಿ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ನೀರು ಪೂರೈಸಲು ಕ್ರಮ ಜರುಗಿಸುವಂತೆ ಸೂಚಿಸಿದರು. ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಲಾಗುತ್ತಿದೆ. ಕಾಲುವೆಗಳಿಂದ ನೀರು ಪೋಲಾಗದಂಗತೆ ಕ್ರಮ ವಹಿಸುವಂತೆಯೂ, ಜಿಲ್ಲೆಯ ಎಲ್ಲ ಕೆರೆಗಳನ್ನು ತುಂಬಿಸಿ ಇಟ್ಟುಕೊಳ್ಳಬೇಕಾದ ಹಿನ್ನೆಲೆಯಲ್ಲಿ ರೈತರು ಅನಧಿಕೃತವಾಗಿ ನೀರಾವರಿ ಪಂಪಸೆಟ್ ಅಳವಡಿಸಿದಂತೆ ನೋಡಿಕೊಳ್ಳಲು,ಪ್ರತಿ ವಾರಕ್ಕೊಮ್ಮೆ ಕುಡಿಯುವ ನೀರಿನ ಪರಿಸ್ಥಿತಿ ನಿರ್ವಹಣೆ ಕುರಿತು ಸಭೆ ನಡೆಸುವ ಮೂಲಕ ಮೇಲ್ವಿಚಾರಣೆ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಸಾಕಷ್ಟು ದಾಸ್ತಾನು ಇಟ್ಟುಕೊಳ್ಳಬೇಕು. ಬೆಳೆ ವಿಮೆ ಕುರಿತು ರೈತರಿಗೆ ಸಮರ್ಪಕವಾದ ಮಾಹಿತಿ ಇಲ್ಲದೆ ಇರುವುದರಿಂದ ರೈತರು ವಿಮೆಗಳಿಂದ ವಂಚಿತರಾಗುತ್ತಿದ್ದು ರೈತರಲ್ಲಿ ಮನವರಿಕೆ ಮಾಡಿ ರೈತರಿಗೆ ವಿಮೆ ಕುರಿತು ಜಾಗೃತಿ ಮೂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಧಿಕಾರಿಗಳು ಕಾಳಜಿವಹಿಸಿ ಕಾರ್ಯ ನಿರ್ವಹಿಸಬೇಕು. ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ತಿಳಿಸಿದರು. ಬರ ಹಿನ್ನೆಲೆಯಲ್ಲಿ ಜನರ ಕಷ್ಟ ಅರಿತು ಕಾರ್ಯನಿರ್ವಹಿಸಬೇಕು. ನರೇಗಾ ಯೋಜನೆಯಡಿ ಹೆಚ್ಚೆಚ್ಚು ಉದ್ಯೋಗ ಒದಗಿಸಬೇಕು ವಿಜಯಪುರ ನಗರದ ಎಲ್ಲ ವಾರ್ಡ್ಗಳಿಗೆ ಸಮರ್ಪಕವಾಗಿ ನೀರು ಪೂರೈಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಸಂಸದರಾದ ರಮೇಶ ಜಿಗಜಿಣಗಿ, ನಾಗಠಾಣ ಶಾಸಕರಾದ ವಿಠ್ಠಲ ಕಟಕದೊಂಡ, ಜಿಲ್ಲಾಧಿಕಾರಿ ಟಿ.ಬೂಬಾಲನ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವನೆ, ಇಂಡಿ ಉಪವಿಭಾಗಾಧಿಕಾರಿ ಅಬೀದ ಗದ್ಯಾಳ, ವಿಜಯಪುರ ಉಪವಿಭಾಗಾಧಿಕಾರಿ ಬಸವಣ್ಣೆಪ್ಪ ಕಲಶೆಟ್ಟಿ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಪಘಾತ: ಬೈಕ್ ಸವಾರ ಸಾವು



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ಬಿದರಕುಂದಿ ಬಳಿಯ ತಿರುವಿನಲ್ಲಿ ಕೆಕೆಆರ್‌ಟಿಸಿ ಬಸ್ ಮತ್ತು ಬೈಕ್ ಮಧ್ಯೆ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ನಡೆದಿದೆ.

ಮೃತ ದುರ್ದೈವಿಯನ್ನು ಸಂಗಣ್ಣ. ಚಂದಪ್ಪ. ತುರಡಗಿ(33) ಎಂದು ಗುರುತಿಸಲಾಗಿದೆ. 9 ವರ್ಷದ ತಂಗಿಯ ಮಗಳೊಂದಿಗೆ ಎಚ್-ಎಫ್ ಡಿಲಕ್ಸ್ ಬೈಕ್ ಮೂಲಕ ಮುದ್ದೇಬಿಹಾಳ ಪಟ್ಟಣಕ್ಕೆ ಬರುವಾಗ ಬಿದರಕುಂದಿ ಬಳಿಯ ತಿರುವಿನಲ್ಲಿ ವಿಜಯಪುರಕ್ಕೆ ತೆರಳುವ ವಿಜಯಪುರ-ಮುದ್ದೇಬಿಹಾಳ ಬಸ್‌ಗೆ ಮುಖಾಮುಖಿ ಡಿಕ್ಕಿಯಾಗಿ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ.

ಘಟನೆಯ ನಂತರ ದಾರಿಹೋಕ ವಾಹನ ಸವಾರರು ಉಪಚರಿಸಿ ಅಂಬುಲೆನ್ಸ್ ಗೆ ಕರೆ ಮಾಡಿ ತಾಲೂಕು ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ದುರ್ಘಟನೆಯಲ್ಲಿ ಗಾಯಾಳುವಿಗೆ ಬಲಗಾಲು ನುಜ್ಜು ನುಜ್ಜಾಗಿದ್ದು ವಿಪರೀತ ರಕ್ತಸ್ರಾವವಾಗಿದ್ದರಿಂದ ಪ್ರಥ-'ಮ ಚಿಕಿತ್ಸೆ ಬಳಿಕ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ ಎನ್ನಲಾಗಿದೆ.

ಜೊತೆಯಲ್ಲಿದ್ದ ಬಾಲಕಿಗೆ ತಲೆ ಒಡೆದು ಗಾಯವಾಗಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು ಬಸ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ವಿಶ್ವಪ್ರಕಾಶ ಮಲಗೊಂಡ ನಟಿಸಿ ನಿರ್ದೇಶಿಸಿರುವ ಕನ್ನಡ ಚಿತ್ರ

# 'ತುಷಾರ್' ಸಿನಿಮಾದ ಹಾಡು ಬಿಡುಗಡೆ




ಉದಯರಶ್ಮಿ ನ್ಯೂಸ್

ವಿಜಯಪುರ: ಈಗಾಗಲೇ ತನ್ನ ಬಹುತೇಕ ಕೆಲಸಗಳನ್ನು ಪೂರ್ಣಗೊಳಿಸಿ ತೆರೆಗೆ ಬರಲು ತಯಾರಾಗುತ್ತಿರುವ "ತುಷಾರ್" ಸಿನಿಮಾದ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಗಿದೆ. 'ನಾ ನಿನ್ನ ಕಾಯೋ ಕಾವಲುಗಾರ' ಎಂಬ ಹಾಡಿಗೆ ಪವನಕುಮಾರ ಬೂದಿಹಾಳ ಸಾಹಿತ್ಯ ಬರೆದಿದ್ದು, ಮಂಜು ಕವಿ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಹಾಡಿಗೆ ಹೊಸ ಪ್ರತಿಭೆ ಆರ್ ಜೆ ನವೀನ್ ಧ್ವನಿಯಾಗಿದ್ದಾರೆ.

ದೀಪಾವಳಿ ಹಬ್ಬದ ಪ್ರಯುಕ್ತ ಚಿತ್ರತಂಡ ಈ ಹಾಡನ್ನು ಙುಚಿಡಿತು ಒಣುಭಿ ಜಂಣುಖಿಣಭಿಜ ಙುಚಿಟಿಟಿಜಟನಲ್ಲಿ ಬಿಡುಗಡೆ ಮಾಡಿದೆ.

ಇದೇ ವೇಳೆ ಮಾತನಾಡಿದ ತುಷಾರ್ ಚಿತ್ರದ ನಟ ನಿರ್ದೇಶಕ ವಿಶ್ವಪ್ರಕಾಶ ಟಿ ಮಲಗೊಂಡ 'ಈಗಾಗಲೇ ತುಷಾರ್ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಬಿರುಸಿನಿಂದ ಸಾಗಿದೆ.

ತುಂಬಾ ಕನಸ್ಸಿಟ್ಟುಕೊಂಡು ಮಾಡಿರುವ ಈ ಸಿನಿಮಾ ದೀಪಾವಳಿ ಹಬ್ಬದ ಹಿನ್ನೆಲೆ ಈ ಹಾಡು ಬಿಡುಗಡೆ ಮಾಡಿದ್ದೇವೆ. ಈ ಹಾಡಿನ ಚಿತ್ರೀಕರಣ ಉತ್ತರ ಕರ್ನಾಟಕ ಹಾಗೂ ಬೆಂಗಳೂರಿನ ಸುತ್ತಮುತ್ತ ನಡೆದಿದೆ ಎಂದರು.

ತುಷಾರ್ ಸಿನಿಮಾಕ್ಕೆ ವಿಶ್ವಪ್ರಕಾಶ ಮಲಗೊಂಡ ನಟನೆಯ ಜೊತೆಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅಪರಾಧಕ್ಕೆ ಸವಾಲು ಕನ್ನಡ ದಿನಪತ್ರಿಕೆ ಸಹಯೋಗದಲ್ಲಿ ಮಲಗೊಂಡ ಫಿಲಂ ಪ್ರೊಡಕ್ಷನ್ ನಿರ್ಮಾಣ ಮಾಡಿದ್ದಾರೆ. ಇನ್ನು ಮಂಜುಕವಿ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಸಾಹಿತ್ಯ ಸಂಭಾಷಣೆ ಪವನ್ ಕುಮಾರ್ ಬೂದಿಹಾಳ, ರವಿ ಕುಂಟೋಜಿ ಛಾಯಾಗ್ರಹಣ, ಚಂದು ಅವರ ಸಂಕಲನ, ಮಲಗೊಂಡ ಫಿಲಂ ಬ್ಯಾನರ್ ಅಡಿಯಲ್ಲಿ, ಸಹ ನಿರ್ದೇಶಕರಾಗಿ ಸುಧಾ ಅಣ್ಣಾಶೇತ, ಉಮೇಶ್ ಕೆ ಎನ್ ಅವರ ಪಬ್ಲಿಸಿಟಿ ಡೀಸೈನ್, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವಿರೇಶ ಹಂಡಗಿ, ಹರೀಶ್ ಅರಸು. ಪೋಸ್ಟರ್ ಡಿಸೈನ್ ವಿಶ್ವ ಬಿರಾದಾರ, ಪ್ರಸಾದ್ ತೋಟದ, ತಂಡದಲ್ಲಿ ಪೃಥ್ವಿರಾಜ್ ನಾಯಕ,ಚಂದ್ರಕಾಂತ ಬೂದಿಹಾಳ, ಶ್ರೇಯಶ್ ದೇಶಪಾಂಡೆ, ಹೀಗೆ ದೊಡ್ಡ ತಾಂತ್ರಿಕ ಬಳಗ ಒಳಗೊಂಡಿದೆ ಚಿತ್ರತಂಡ.

# ಕಾಯಕವೇ ಹಬ್ಬವೆನ್ನುವ ಪೌರಕಾರ್ಮಿಕರು



ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಬೆಳಕಿನ ಹಬ್ಬ ದೀಪಾವಳಿಯ ಪಾಡ್ಯ ಆಚರಣೆ ಮಂಗಳವಾರ ಜನರು ಮಾಡುತ್ತಿದ್ದರೆ ಪುರಸಭೆ ಪೌರಕಾರ್ಮಿಕರು ರಸ್ತೆಯ ಬದಿಯಲ್ಲಿ ಬಿದ್ದಿರುವ ಕಸವನ್ನು ಸಂಗ್ರಹಿಸುವ ಕಾಯಕದಲ್ಲಿ ತೊಡಗಿರುವುದು ಕಂಡುಬಂದಿತ್ತು. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಹೆಚ್ಚು ಕಸ ಸಂಗ್ರಹವಾಗಿದೆ.

ಸೋಮವಾರ ಒಂದು ಟ್ರ್ಯಾಕ್ಟರ್ ಬಾಳೆದೆಲೆಯ ಮೂರು ಟನ್ವರೆಗೆ , ಮಂಗಳವಾರ ಒಂದು ಟ್ರ್ಯಾಕ್ಟರ್, ಎರಡು ಟಿಪ್ಪರ್ ಬಾಳೆದಿಂಡು ಸೇರಿ 10 ಟನ್ವರೆಗೆ ಕಸ ಸಂಗ್ರಹವಾಗಿದೆ. ದೀಪಾವಳಿ ಹಬ್ಬದ ಎರಡು ದಿನಗಳಲ್ಲಿ ಅಂದಾಜು 13 ಟನ್ ಕಸ ಸಂಗ್ರಹವಾಗಿದೆ. ನಮ್ಮ ಸಿಬ್ಬಂದಿಗಳು ಸಂಗ್ರಹಿಸಿದ ಕಸವನ್ನು ಘನತ್ಯಾಜ್ಯ ಘಟಕಕ್ಕೆ ತಂದ ನಂತರ ಅದನ್ನು ಹಸಿ,ಒಣ ಕಸ ಎಂದು ಬೇರ್ಪಡಿಸಿ ಅದನ್ನು ಕೊಳೆಯಿಸಿ ಗೊಬ್ಬರ ಮಾಡಲಾಗುತ್ತದೆ. ಬುಧವಾರ ಅಂದಾಜು ಒಂದು ಟ್ಯಾಕ್ಟರನ್, ಮೂರು ಟಿಪ್ಪರ್ ಬಾಳೆದಿಂಡು ಸೇರಿದಂತೆ 15 ಟನ್ ವರೆಗೂ ಕಸ ಸಂಗ್ರಹವಾಗಬಹುದು ಎಂದು ಪುರಸಭೆ ಕಿರಿಯ ಆರೋಗ್ಯ ಸಹಾಯಕ ಮಹೇಶ ಹಿರೇಮಠ ಪತ್ರಿಕೆಗೆ ಮಾಹಿತಿ ನೀಡಿದರು.

# ಅತಿಸಾರ ನಿಯಂತ್ರಣ ಪಾಕ್ಷಿಕ ದರ್ಶಿಕೆ ಬಿಡುಗಡೆ




ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಚಿಕ್ಕ ಮಕ್ಕಳಲ್ಲಿ ಅತಿಸಾರ ಭೇದಿ ಉಂಟಾದಲ್ಲಿ ಪಾಲಕರು ತಪ್ಪದೇ ಓ.ಆರ್.ಎಸ್ ದ್ರಾವಣ ಕುಡಿಸಬೇಕು. ಅತಿಯಾದ ಭೇದಿಯಿಂದ ಬಳಲುವ ಮಕ್ಕಳಿಗೆ ಜಿಂಕ್ ಮಾತ್ರೆ ನೀಡಬೇಕು ಎಂದು ತಾಲೂಕ ಆರೋಗ್ಯ ಅಧಿಕಾರಿ ಡಾ.ಸತೀಶ್ ತಿವಾರಿ ಹೇಳಿದರು.

ಪಟ್ಟಣದ ಹೊರಪೇಟೆ ಗಲ್ಲಿಯಲ್ಲಿರುವ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಒಂದು ಸಾಮಾಜಿಕ ಅರಿವಿನ ಆಂದೋಲನವನ್ನಾಗಿಸುವ ಪ್ರಯುಕ್ತ ನಡೆದ ತೀವ್ರ ಅತಿಸಾರ ನಿಯಂತ್ರಣ ಪಾಕ್ಷಿಕ ದರ್ಶಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಓ.ಆರ್.ಎಸ್ ಜಿಂಕ್ ಮಾತ್ರೆಗಳ ಕಾರ್ನರ್ ತೆರೆಯಲಾಗಿದೆ. ನಿಮ್ಮ ಮಕ್ಕಳಲ್ಲಿ ಅತಿಯಾದ ಭೇದಿ ಕಂಡುಬಂದಲ್ಲಿ ಅವಶ್ಯಕವಾಗಿ ಭೇಟಿ ನೀಡಿ ಅತಿಸಾರ ಭೇದಿಯ ರೋಗ ಸ್ಪೋಟವನ್ನು ತಪ್ಪಿಸಿ, ಮನೆಯಲ್ಲಿ ಶುದ್ಧವಾಗಿ ತಯಾರಿಸಿದ ಅಹಾರವನ್ನು ತಿನ್ನಿರಿ, ಬೀದಿ ಬದಿಯ ಅಹಾರವನ್ನು ಸೇವಿಸದಂತೆ ಸಲಹೆ ನೀಡಿದರು.

ನಗರ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಎಸ್. ಗೌಡರ ಮಾತನಾಡಿ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ತಮ್ಮ ವ್ಯಾಪ್ತಿಯಲ್ಲಿನ ಮನೆಗಳಿಗೆ ಭೇಟಿ ನೀಡಿ ಐದು ವರ್ಷದೊಳಗಿನ ಮಕ್ಕಳನ್ನು ಪರೀಕ್ಷಿಸಿ ಅತಿಸಾರ ಭೇದಿ ಕಂಡುಬಂದಲ್ಲಿ ಓ.ಆರ್.ಎಸ್ ಹಾಗೂ ಜಿಂಕ್ ಮಾತ್ರೆಗಳನ್ನು ನೀಡುತ್ತಿದ್ದು ನಿಸ್ಸಂದೇಹವಾಗಿ ಸ್ವೀಕರಿಸಬಹುದು ಎಂದರು.

ಇದೇ ವೇಳೆ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರಿಗೆ ಜಿಂಕ್ ಮಾತ್ರೆಗಳ ಲಭ್ಯತೆ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಐ.ಸಿ.ಮಾನಕರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಎಸ್.ಮನಹಳ್ಳಿ, ಆರೋಗ್ಯ ನಿರೀಕ್ಷಣಾಧಿಕಾರಿ ಎನ್.ಜಿ.ತಾಳಿಕೋಟಿ, ಎಸ್.ಎಸ್.ಸಜ್ಜನ್, ಇಸ್ಮಾಯಿಲ್ ವಾಲೀಕಾರ್, ಬಿಪಿಎಂಓ ಬಸವರಾಜ್, ಎಸ್.ಸಿ.ರುದ್ರವಾಡಿ, ಅಂಗನವಾಡಿ ಕಾರ್ಯಕರ್ತೆಯರಾದ ಶೈಲಜ ರಾಠೋಡ, ಶರೀಫ ಸಗರ್, ಲತಾ ಕುಲಕರ್ಣಿ ಸೇರಿದಂತೆ ಆಶಾ ಕಾರ್ಯಕರ್ತರು ಇದ್ದರು.

# ಗೋವು ಸಮೃದ್ಧಿಯ ಸಂಕೇತ :ಶಾಸಕ ಮನಗೂಳಿ



ಉದಯರಶ್ಮಿ ನ್ಯೂಸ್

ಸಿಂದಗಿ: ಗೋವು ಸಮೃದ್ಧಿಯ ಸಂಕೇತ. ಮನೆಗಳಲ್ಲಿ ಗೋವುಗಳು ಇರುವುದರಿಂದ ನೂರಾರು ರೋಗ ರೂಜಿನಗಳು ದೂರವಾಗುತ್ತವೆ. ಇದು ವೈಜ್ಞಾನಿಕವಾಗಿ ಸತ್ಯವಾಗಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ಸಂಗಮೇಶ್ವರ ದೇವಸ್ಥಾನದಲ್ಲಿ ಮಂಗಳವಾರ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿ ಗೋ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಗೋವಿಗೆ ಆಹಾರವನ್ನುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗೋವು ಐಶ್ವರ್ಯ ಮತ್ತು ಮೋಕ್ಷದ ಪ್ರತೀಕವಾಗಿದೆ. ಗೋವಿನ ಪೂಜೆ ಅನಾದಿಕಾಲದಿಂದಲೂ ನಮ್ಮ ದೇಶದಲ್ಲಿ ಮಾಡುತ್ತಾ ಬಂದಿದ್ದಾರೆ. ಗೋಪೂಜೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಗೋವಿನ ದೇಹದಲ್ಲಿ ಅನೇಕ ದೇವತೆಗಳು ವಾಸ ಮಾಡಿರುತ್ತಾರೆ ಎಂಬ ಪ್ರತೀತಿ ಇದೆ. ನಮ್ಮ ಹಿರಿಯರು ಗೋವುಗಳನ್ನ ಸಾಕುವ ಮೂಲಕ ನಮಗೆಲ್ಲ ಒಂದು ಸಂಸ್ಕೃತಿಯನ್ನು ಕಲಿಸಿದ್ದಾರೆ ಆ ಪರಂಪರೆ ಮುಂದುವರೆಯಬೇಕು ಎಂದು ಹೇಳಿದರು.

ಈ ವೇಳೆ ತಹಶೀಲ್ದಾರ್ ಪ್ರದೀಪಕುಮಾರ್ ಹಿರೇಮಠ ಮಾತನಾಡಿದರು. ವೇದಿಕೆಯ ಮೇಲೆ ಪಶು ವೈದ್ಯಾಧಿಕಾರಿ ಡಾ. ಮಾರುತಿ ತಡಲಗಿ ಇದ್ದರು.

ಕಾರ್ಯಕ್ರಮದಲ್ಲಿ ಎಸ್.ಎಂ ಬಿರಾದಾರ, ರಾಜಶೇಖರ ಹೆಬ್ಬಾಳ ಸೇರಿದಂತೆ ತಾಲೂಕಾಡಳಿತ ಇಲಾಖೆಯ ಸಿಬ್ಬಂದಿಗಳು ಇದ್ದರು.4

# ದೀಪಾವಳಿ ಪಾಡ್ಯ ಆಚರಣೆ



ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಜನರು ಮಂಗಳವಾರ ಬೆಳಕಿನ ಹಬ್ಬ ದೀಪಾವಳಿಯ ಬಲಿಪಾಡ್ಯ ಹಬ್ಬವನ್ನು ಆಚರಣೆ ಮಾಡಿದರು. ಬೆಳಗ್ಗೆ ಬೇಗನೆ ಎದ್ದು ಸ್ನಾನಾದಿ ಕ್ರಿಯೆಯಾದ ನಂತರ ಪ್ರತಿಯೊಂದು ಮನೆಯಲ್ಲಿ ದೀಪಾವಳಿ ಪಾಡ್ಯದಂದು ಸಂಪ್ರದಾಯದಂತೆ ಸಹೋದ-ರಿಯರು ತಮ್ಮ ಸಹೋದರರಿಗೆ ಆರತಿ ಬೆಳಗಿದರು.

ಪಾಡ್ಯ ಪೂಜೆ ನೆರವೇರಿದ ನಂತರ ಮನೆ ಮುಂದೆ ಪಾಂಡವರ ಪೂಜೆ ಮಾಡುವುದು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯ. ಸಂಪ್ರದಾಯದಂತೆ ಪಟ್ಟಣ ಸೇ-ರಿದಂತೆ ತಾಲೂಕಿನಲ್ಲಿ ಜನರು ತಮ್ಮ ಮನೆಗಳ ಮುಂದೆ ಪಾಂಡವರನ್ನು, ಗುಳ್ಳವ್ವರನ್ನು ಸೆಗಣಿಯಿಂದ ಮಾಡಿದ್ದು ಕಂಡುಬಂದಿತ್ತು. ಪಾಡ್ಯದಿನದಂದು ಜನರು ಕುಟುಂಬ ಸದಸ್ಯರೊಂದಿಗೆ ತಮ್ಮ ಇಷ್ಟದೇವರ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದುಕೊಂಡರು. ವಿವಿಧ ದೇವಸ್ಥಾನಗಳಲ್ಲಿ ಹೆಚ್ಚು ಜನರು ದೇವರ ದರ್ಶನ ಪಡೆದುಕೊಂಡರು.

ಪಾಂಡವರು ಅಜ್ಞಾತವಾಸ ಮುಗಿಸಿ ನಂತರ ಬನ್ನಿ ಗಿಡದಲ್ಲಿ ಅಡಗಿಸಿಟ್ಟಿದ್ದ ಆಯುಧಗಳನ್ನು ಪಾಡ್ಯದ ದಿನ ತೆಗೆದುಕೊಂಡು ಬಂದಿದ್ದರ ವಿಜಯೋತ್ಸವದ ಸಂಕೇತವಾಗಿ ಮನೆಯ ಮುಂದೆ ಪಾಡವರು ಕೌರವರನ್ನು ಸಂಹಾರ ಮಾಡಿದ ಚಿತ್ರ ಬಿಂಬಿಸುವಂತೆ ಸಗಣಿಯಿಂದ ಗೊಂಬೆಗಳನ್ನು ಮಾಡಿ ಹೂವುಗಳಿಂದ ಅಲಂಕರಿಸಿ ಪೂಜೆ ಮಾಡಲಾಗುತ್ತಿದೆ ಎಂದು ಕೆಲ ಹಿರಿಯರು ಹೇಳಿದರು.

ಪಾಂಡವರು ಅಜ್ಞಾತವಾಸ ಯಶಸ್ವಿಯಾಗಿ ಪೂರ್ಣಗೊಳಿಸಿ ಸುರಕ್ಷಿತವಾಗಿ ಬರಲಿ ಎಂಬ ಸಂಕೇತವಾಗಿ ಪಾಂಡವರ (ಗುಳ್ಳವ್ವ ಪೂಜೆ) ಪೂಜೆ ಎಂದು ಕರೆಯಲಾಗುತ್ತಿದೆ ಎಂದು ಕೆಲ ಮಹಿಳೆಯರು ಹೇಳಿದರು. ಪಾಡ್ಯ ದಿನದಂದು ಮನೆಯ ಮುಂದೆ ಸೆಗಣಿಯಿಂದ ತಯಾರಿಸಿದ ಗೊಂಬೆಗಳಿಗೆ ಚೆಂಡು ಹೂವು, ತತ್ರಾಣಿ ಕಡ್ಡಿ, ಅವರೆ ಹೂವುಗಳಿಂದ ಅಲಂಕರಿಸಿ ಮೊಸರು ಸೇರಿದಂತೆ ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುವುದು ವಿಶೇಷ. ಶನಿವಾರ ದೀಪಾವಳಿ ಹಬ್ಬದ ಕಡೆ ಪಾಡ್ಯ ಆಚರಣೆಯೊಂದಿಗೆ ಬೆಳಕಿನ ಹಬ್ಬ ದೀಪಾವಳಿ ಆಚರಣೆ ಸಂಪನ್ನವಾಗುತ್ತದೆ.

# ನ.17-18ರಂದು ಅಂತರಕಾಲೇಜ್ ಏಕವಲಯ ಕುಸ್ತಿ ಪಂದ್ಯಾವಳಿ



ಉದಯರಶ್ಮಿ ನ್ಯೂಸ್

ಸಿಂದಗಿ: ಮಹಾವಿದ್ಯಾಲಯದ ಸಭಾಭವನದಲ್ಲಿ ನ.17 ಮತ್ತು 18ರಂದು ಅಂತರ್ ಕಾಲೇಜು ಮಟ್ಟದ್ ಏಕವಲಯ ಕುಸ್ತಿ ಪಂದ್ಯಾವಳಿ ಹಾಗೂ ಆಯ್ಕೆಯ ಪ್ರಕ್ರಿಯೆ ಜರುಗಲಿದೆ ಎಂದು ಕ್ರೀಡಾ ಕೂಟದ ಸಂಘಟನಾ ಕಾರ್ಯದರ್ಶಿ, ದೈಹಿಕ ನಿರ್ದೇಶಕ ಡಾ.ಅಂಬರೀಶ ಬಿರಾದಾರ ತಿಳಿಸಿದರು.

ನಗರದ ಸಿ.ಎಂ ಮನಗೂಳಿ ಮಹಾವಿದ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸಹಯೋಗದಲ್ಲಿ ಸಿ.ಎಮ್. ಮನಗೂಳಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ಬಾಗಲಕೋಟ, ಚಿಕ್ಕೋಡಿ, ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳು ಸೇರಿ ನಾಲ್ಕು ವಲಯದ ಪುರುಷ ಮತ್ತು ಮಹಿಳೆಯರ ಏಕವಲಯ ಕುಸ್ತಿ ಪಂದ್ಯಾವಳಿ ಜರುಗಲಿದೆ. ಈ ಪಂದ್ಯಾವಳಿಯಲ್ಲಿ 55 ಕೆ.ಜಿ ಯಿಂದ 120 ಕೆ.ಜಿ ವರೆಗಿರುವ 150ಕ್ಕೂ ಹೆಚ್ಚು ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಭಾಗವಹಿಸುವ ನಿರಿಕ್ಷೇಯಿದೆ ಎಂದರು.

ಈ ವೇಳೆ ಕ್ರೀಡಾ ಕೂಟದ ಸಂಘಟನಾ ಕಾರ್ಯದರ್ಶಿ, ದೈಹಿಕ ನಿರ್ದೇಶಕ ಡಾ.ಅಂಬರೀಶ ಬಿರಾದಾರ ಮಾತನಾಡಿ, 17ರಂದು ನಡೆಯಲಿರುವ ಕಾರ್ಯಕ್ರಮವನ್ನು ಶಾಸಕರು ಹಾಗೂ ಸಂಸ್ಥೆಯ ಅಧ್ಯಕ್ಷರಾದ ಅಶೋಕ ಮನಗೂಳಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ವಿಶ್ರಾಂತ ದೈಹಿಕ ನಿರ್ದೇಶಕ ಆರ್.ಬಿ.ಬೂದಿಹಾಳ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ತಾಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ನಿರ್ದೇಶಕ ಶಿವಪ್ಪಗೌಡ ಬಿರಾದಾರ, ರಾಣಿಚನ್ನಮ್ ವಿವಿಯ ದೈಹಿಕ ನಿರ್ದೇಶಕ ಜಗದೀಶ ಗಸ್ತಿ ಭಾಗವಹಿಸಲಿದ್ದಾರೆ. ಕೆ.ಹೆಚ್. ಸೋಮಾಪೂರ, ಹೆಚ್.ಎಮ್. ಉತ್ನಾಳ, ರವಿ ಗೋಲಾ ಗೌರವ ಉಪಸ್ಥಿತಿ ವಹಿಸಿಕೊಳ್ಳಲಿದ್ದಾರೆ. ಮೈದಾನ ಪೂಜೆಯನ್ನು ಕಲಕೇರಿಯ ಪಪೂ ಕಾಲೇಜಿನ ದೈಹಿಕ ಶಿಕ್ಷಕ ಶಾಂತು ದುರ್ಗಿ ಮಾಡಲಿದ್ದಾರೆ. 18ರಂದು ನಡೆಯುವ ಪಾರಿತೋಷಕ ವಿತರಣಾ ಸಮಾರಂಭದಲ್ಲಿ ಜಗದೀಶ ಗಸ್ತಿ ಹಾಗೂ ಪ್ರಾಚಾರ್ಯ ಡಾ.ಬಿ.ಜಿ. ಪಾಟೀಲ ಇರಲಿದ್ದಾರೆ ಎಂದು ತಿಳಿಸಿದ್ದಾರೆ.

ಈ ವೇಳೆ ಎಸ್.ಎ ಜಾಹಗೀರದಾರ, ಕೆ.ಹೆಚ್. ಸೋಮಾಪೂರ, ಎಸ್. ಹೆಚ್. ಹೂಗಾರ, ಜಿ.ಜಿ. ಕಾಂಬಳೆ, ಎಸ್.ಎಂ. ಬಿರಾದಾರ ಸೇರಿದಂತೆ ಇತರರು ಇದ್ದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆರೋಗ್ಯ ದೀಪೋತ್ಸವ । ರೋಗಿಗಳಿಗೆ ಹಬ್ಬದ ವಾತಾವರಣ । ಶೈಲಜಾ ಪಾಟೀಲ ಅಭಿಮತ

# ಆಸ್ಪತ್ರೆಗಳು ಸ್ವಸ್ತ ಸಮಾಜ ನಿರ್ಮಾಣದ ಶಕ್ತಿ ಕೇಂದ್ರಗಳಾಗಲಿ

ಉದಯರಶ್ಮಿ ನ್ಯೂಸ್

ವಿಜಯಪುರ: ಆಸ್ಪತ್ರೆ ಎಂದರೆ ಕೇವಲ ಆರೋಗ್ಯ ಸುಧಾರಣಾ ಕೇಂದ್ರಗಳಾಗುವುದಕ್ಕಿಂತ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡುವ ಶಕ್ತಿ ಕೇಂದ್ರಗಳಾಗಬೇಕು. ಆರೋಗ್ಯದ ಜೊತೆಯಲ್ಲಿ ಸಂಸ್ಕಾರ, ಸಂಸ್ಕೃತಿಯನು ಉಳಿಸುವ ಕಾಯಕವನ್ನು ಮಾಡಬೇಕು ಎನ್ನುವುದಕ್ಕೆ ನಮ್ಮ ಜೆಎಸ್‌ಎಸ್ ಆಸ್ಪತ್ರೆ ಸಾಕ್ಷಿಯಾಗಿದೆ ಎಂದು ಶ್ರೀಮತಿ ಶೈಲಜಾ ಬಸನಗೌಡ ಪಾಟೀಲ್ ಯತ್ನಾಳ ಅವರು ಹೇಳಿದರು.

ನಗರದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪೂಜ್ಯ ಸಿದ್ಧೇಶ್ವರ ಸ್ವಾಮೀಜಿ ಜನ್ಮ ದಿನೋತ್ಸವ ಹಾಗೂ ದೀಪಾವಳಿ ಅಂಗವಾಗಿ ಆಯೋಜಿಸಲಾಗಿದ್ದ 'ಆರೋಗ್ಯ ದೀಪೋತ್ಸವ' ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು; ಇಂದು ನಮ್ಮ ದೇಶದ ಸಂಸ್ಕಾರ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಹಬ್ಬ ಹರಿದಿನಗಳ ಬಗ್ಗೆ ಮಕ್ಕಳಲ್ಲಿ ಜ್ಞಾನ ಮೂಡಿಸಿ ನಮ್ಮ ದೇಶದ ಬಗ್ಗೆ ಅಭಿಮಾನ ಉಂಟು ಮಾಡಬೇಕಾದ ಗುರುತರ ಜವಾಬ್ದಾರಿ ನಮ್ಮ ಹೆಗಲ ಮೇಲಿದೆ. ಈ ಜವಾಬ್ದಾರಿಯನ್ನು ಅರಿತುಕೊಂಡು ಹೆಜ್ಜೆ ಹಾಕುತ್ತಿರುವ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಪೂಜ್ಯರ ಜನ್ಮದಿನೋತ್ಸವದ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಗುಣಮುಖರಾಗಿ ಆಸ್ಪತ್ರೆಯಿಂದ ತೆರಳಿದ ರೋಗಿಗಳು ಹಾಗೂ



ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳು ಹಾಗೂ ಅವರ ಸಂಬಂಧಿಕರ ಆದಿಯಾಗಿ ಎಲ್ಲರನ್ನು ಒಳಗೊಂಡಂತೆ ಆರೋಗ್ಯ ದೀಪೋತ್ಸವ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದು ನಿಜಕ್ಕೂ ಮಾದ-ರಿಯ ಕಾರ್ಯವಾಗಿದೆ ಎಂದರು.

ಪೂಜ್ಯರ ಜನ್ಮ ದಿನದ ನಿಮಿತ್ಯವಾಗಿ ಬೆಳಿಗ್ಗೆ ರೋಗಿಗಳಿಗೆ ಹಣ್ಣು ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜ್ಞಾನಯೋಗಾಶ್ರಮದ ಪೂಜ್ಯ ಬಸವಲಿಂಗ ಸ್ವಾಮೀಗಳು ಮಾತನಾಡಿ; ಬುದ್ಧೀಜಿ ಅವರ ಹೆಸರಿನಲ್ಲಿ ಪ್ರಾರಂಭಗೊಂಡ ಈ ಆಸ್ಪತ್ರೆಯು ಕಡಿಮೆ ಅವಧಿಯಲ್ಲಿ ಜನಪ್ರೀಯತೆಯನ್ನು ಪಡೆದುಕೊಳ್ಳುತ್ತಿದೆ. ಸಾರ್ವಜನಿಕರಿಗೆ ನೆರವಾಗುವ ಮೂಲಕ ಉತ್ತಮ ಸಮಾಜಸೇವೆ ಮಾಡುತ್ತಲಿದೆ. ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜನೆ ಮಾಡುವ ಮೂಲಕ ಆಸ್ಪತ್ರೆಯನ್ನೇ ಸಾರ್ವಜನಿಕರ ಬಳಿ ತೆಗೆದುಕೊಂಡು ಹೋಗಿ ನೆರವಾಗುವುದರೊಂದಿಗೆ, ಸನಾತನ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವ ಯತ್ನವನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಸಿದ್ಧೇಶ್ವರ ಸಂಸ್ಥೆಯ ಉಪಾಧ್ಯಕ್ಷ ಸಂಗೂ ಸಜ್ಜನ, ಜೆಎಸ್‌ಎಸ್ ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್, ಸೀಮಾ ಕೋರೆ, ಶಿಕ್ಷಕಿ ಮಾಧುರಿ ಹಾಗೂ ಮಾನವ ಸಂಪನ್ಮೂಲ ಅಧಿಕಾರಿ ಲೀಲಾವತಿ ಸೇರಿದಂತೆ ಸ್ಥಳೀಯರು ಹಾಗೂ ಆಸ್ಪತ್ರೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಪಂಢರಾಪುರ ಜಾತ್ರೆಗೆ ವಿಶೇಷ ಸಾರಿಗೆ ವ್ಯವಸ್ಥೆ

ಉದಯರಶ್ಮಿ ನ್ಯೂಸ್

ವಿಜಯಪುರ: ಮಹಾರಾಷ್ಟ್ರದ ಪಂಢರಪುರದಲ್ಲಿ ದಿನಾಂಕ: 19-11-2023 ರಿಂದ 25-11-2023ರವರೆಗೆ ನಡೆಯುವ ಕಾರ್ತಿಕ ಏಕಾದಶಿ ಜಾತ್ರೆ ಅಂಗವಾಗಿ ಯಾತ್ರಾರ್ಥಿಗಳಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದಿಂದ ವಿಶೇಷ ಸಾರಿಗೆ ವ್ಯವ್ಯಸ್ಥೆ ಕಲ್ಪಿಸಲಾಗಿದೆ. ಜಾತ್ರೆಯ ಅಂಗವಾಗಿ ವಿಜಯಪುರ ವಿಭಾಗದ ಇಂಡಿ, ಸಿಂದಗಿ, ಮುದ್ದೇಬಿಹಾಳ, ತಾಳಿಕೋಟಿ ಹಾಗೂ ಬಸವನ ಬಾಗೇವಾಡಿ ಘಟಕದ ಕೇಂದ್ರ ಬಸ್ ನಿಲ್ದಾಣಗಳಿಂದ ವಿಶೇಷ ಸಾರಿಗೆ ಕಾರ್ಯಾಚರಣೆ ಮಾಡಲಾಗುವುದು.

ಒಂದೇ ಗುಂಪಿನಿಂದ ಪ್ರಾಯಾಣಿಸುವ ಕನಿಷ್ಠ 55 ಜನ ಪ್ರಯಾಣಿಕರು ಲಭ್ಯವಾದಲ್ಲಿ ಅವರ ಸ್ವಸ್ಥಳದಿಂದಲೇ ನೇರವಾಗಿ ಪಂಢರಪುರಕ್ಕೆ ಬಸ್ಸಿನ ವ್ಯವಸ್ಥೆ ಕಲ್ಪಿಸಲಾಗುವುದು. ಪ್ರಯಾಣಿಕರು ಸಾರಿಗೆ ಸೌಲಭ್ಯಕ್ಕಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಬಸ್ ನಿಲ್ದಾಣ ವಿಜಯಪುರ ಸಹಾಯಕ ಸಂಚಾರ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ: 7760992258, ಘಟಕ ವ್ಯವಸ್ಥಾಪಕರು ವಿಜಯಪುರ-1: ಮೊ: 7760992263, ವಿಜಯಪುರ-2 ಮೊ: 7760992264, ವಿಜಯಪುರ-3 ಮೊ: 7760914008, ಇಂಡಿ ಮೊ: 7760992265, ಸಿಂದಗಿ ಮೊ: 7760992266, ಮುದ್ದೇಬಿಹಾಳ ಮೊ: 7760992267, ತಾಳಿಕೋಟ ಮೊ: 7760992268, ಬಸವನಬಾಗೇವಾಡಿ ಮೊ: 7760992269, ಕೇಂದ್ರ ಬಸ್ ನಿಲ್ದಾಣ ವಿಜಯಪುರ ದೂರವಾಣಿ ಸಂಖ್ಯೆ 08352-251344 ಗೆ ಸಂಪರ್ಕಿಸಬಹುದಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರುವಿನ ಮಾರ್ಗದರ್ಶನವಿರಬೇಕು :ಸಿದ್ದಲಿಂಗ ಶ್ರೀ

ಉದಯರಶ್ಮಿ ನ್ಯೂಸ್

ಸಿಂದಗಿ: ನಮ್ಮ ಮನಸ್ಸು ನಮ್ಮ ಹತೋಟಿಯಲ್ಲಿರಬೇಕಾದರೆ ಗುರುವಿನ ಮಾರ್ಗದರ್ಶನವಿರಬೇಕು ಎಂದು ಕನ್ನೋಳ್ಳಿ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯರು ಹೇಳಿದರು.

ಪಟ್ಟಣದ ಸಾರಂಗಮಠದಲ್ಲಿ ಮಂಗಳವಾರ ನಡೆದ ಪೂಜ್ಯಶ್ರೀ ಚನ್ನವೀರ ಸ್ವಾಮೀಜಿಯವರ 130ನೆಯ ಜಯಂತೋತ್ಸವ ಹಾಗೂ ಶಿವಶರಣೆಯರ ಜೀವನ ಚರಿತಾಮೃತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗುರುವಿನ ಮಾರ್ಗದರ್ಶವಿದ್ದೆಡೆ ನಮ್ಮ ಮನಸ್ಸು ನಮ್ಮ ಮಾತು ಕೇಳುತ್ತದೆ. ನಮ್ಮ ಮನಸ್ಸು ನಾವು ಹೇಳಿದ ಹಾಗೆ ಕೇಳ್ತದೆ ಮತ್ತು ಸಂಸ್ಕಾರ ನೀಡುತ್ತದೆ ಇಲ್ಲ ಅಂ-ದರೆ ಸಂಸ್ಕಾರ ನೀಡುವುದಿಲ್ಲ. ಗುರು ನಮ್ಮನ್ನು ಕಾಯುತ್ತಾನೆ ಆ ಗುರುವನ್ನು ನಾವೆಂದು ಮರೆಯುಬಾರದು. ನಾವೆಷ್ಟು ಗುರವಿನ ಸ್ಮರಣೆ, ಗುರುವಿನ ಸೇವೆ ಮಾಡುತ್ತೇವೆ ಅಷ್ಟು ನಮಗೆ ದೊರಕುತ್ತಾನೆ ಎಂದರು.

ಈ ವೇಳೆ ಭೀಮಾಶಂಕರ ಶ್ರೀಮಠದ ದತ್ತಪ್ಪಯ್ಯ ಮಹಾರಾಜರು, ಗುರುದೇವಾಶ್ರಮದ ಶಾಂತಗಂಗಾಧರ ಶ್ರೀಗಳು, ವಿರಕ್ತಮಠದ ಬಸವಪ್ರಭು ಶ್ರೀಗಳು ಮಾತನಾಡಿದರು.



ಶಿವಶರಣೆ ತೋಂಗಿನ ಮಹಾದೇವಿಯ ವಚನಾಮೃತವನ್ನು ವಿಶ್ರಾಂತ ಪ್ರಾಧ್ಯಾಪಕ, ಪ್ರವಚನಕಾರ ಬಿ.ಎನ್. ಪಾಟೀಲ ಇಬ್ರಾಹಿಂಪುರ ಪ್ರವಚನವನ್ನು ನೀಡಿದರು.

ಇದೇ ಸಂದರ್ಭದಲ್ಲಿ ಸಾರಂಗಮಠದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಆಶೀರ್ವಚನ ನೀಡಿದರು. ಡಾ.ಶರಣಬಸವ ಜೋಗುರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೃತ್ಯುಂಜಯ ಚನ್ನಪ್ಪ ಕತ್ತಿ ಕುಟುಂಬ ದಾಸೋಹ ಸೇವೆಗೈದರು.

ಈ ವೇಳೆ ಚನ್ನಪ್ಪ ಕತ್ತಿ, ಎಸ್.ಡಿ ಜೋಗುರ, ಸೋಮನಗೌಡ ಬಿರಾದಾರ, ಮಲ್ಲನಗೌಡ ಪಾಟೀಲ, ಸಂಚಾಲಕ ವ್ಹಿ.ಡಿ.ವಸ್ತ್ರದ, ಗಂಗಾಧರ ಜೋಗೂರ, ಜೆ.ಸಿ.ನಂದಿಕೋಲ, ಎಸ್.ಎಮ್.ಬಿರಾದಾರ, ಶ್ರೀಶೈಲ ನಂದಿಕೋಲ, ಕೆ.ಎಚ್.ಸೋಮಾಪೂರ, ವಿಶ್ವನಾಥ ನಂದಿಕೋಲ, ವಿರೇಶ ಜೋಗೂರ, ಶಿವಕುಮಾರ ಜೋಗೂರ, ಭಾಗ್ಯಶ್ರೀ ನಂದಿಮಠ, ಮುಕ್ತಾಯಕ್ಕ ಕತ್ತಿ, ನೀಲಾಂಬಿಕಾ ಕತ್ತಿ ಸೇರಿದಂತೆ ಶ್ರೀಮಠದ ಭಕ್ತರಿದ್ದರು.

# ವಿದ್ಯಾಭಾರತಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಮಕ್ಕಳಿಗೆ ವಿದ್ಯೆ ಎಷ್ಟು ಮುಖ್ಯವೋ ಅದರಷ್ಟೇ ಕ್ರೀಡಾ ಮತ್ತು ಮನರಂಜನೆ ಚಟುವಟಿಕೆ ಕೂಡ ಮುಖ್ಯ ಎಂದು ವಿದ್ಯಾಭಾರತಿ ಶಾಲೆಯ ಸಂಸ್ಥಾಪಕ ಎನ್.ಎಸ್.ಹಿರೇಮಠ ಹೇಳಿದರು.

ಪಟ್ಟಣದ ಹುಡ್ಕೋ ಬಡಾವಣೆಯ ಶಿರವಾಳ ಲೇಔಟ ನಲ್ಲಿರುವ ವಿದ್ಯಾಭಾರತಿ ಶಾಲೆಯಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸ್ಪರ್ದೆ, ಹಾಡು, ಡಾನ್ಸ್, ಭರತನಾಟ್ಯ, ಡಿಸ್ಕೋ ಚೇರ್, ಕಾಲಾ ಚಸಮಾ, ಲಿಂಬೆಹಣ್ಣು ಚಾಲೆಂಜ್ ಸೇರಿದಂತೆ ಮತ್ತೀತರ ಆಟಗಳು ಮತ್ತು ಮನರಂಜನಾ ಕಾರ್ಯಕ್ರಮಗಳ ಮೂಲಕ ಮಕ್ಕಳ ದಿನಾಚರಣೆಯನ್ನು ಅರ್ಥ-ಪೂರ್ಣವಾಗಿ ಆಚರಿಸಲಾಯಿತು. ವಿವಿಧ ಸ್ಪರ್ದೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಈ ವೇಳೆ ಶಾಲೆಯ ಎಲ್ಲ ವಿದ್ಯಾರ್ಥಿಗಳು, ಶಿಕ್ಷಕರು ಪಾಲ್ಗೊಂಡು ಸಂಭ್ರಮಿಸಿದರು.

# ಉರ್ದು ಪ್ರೌಢ ಶಾಲೆಯಲ್ಲಿ ನೆಹರು ಜನ್ಮದಿನಾಚರಣೆ



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಪಟ್ಟಣದ ಮಹೆಬೂಬ ನಗರದಲ್ಲಿರುವ ಸರ್ಕಾರಿ ಉರ್ದು ಪ್ರೌಢ ಶಾಲೆಯಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರ ಜನ್ಮದಿನಾಚರಣೆಯನ್ನು ವಿದ್ಯಾರ್ಥಿಗಳು, ಶಿಕ್ಷಕರು ಕೇಕ್ ಕತ್ತರಿಸುವ ಮೂಲಕ ಆಚರಿಸಿ ಸಂಭ್ರಮಿಸಿದರು.

ಈ ವೇಳೆ ಪ್ರಭಾರಿ ಮುಖ್ಯೋಪಾದ್ಯಾಯ ಎ.ಸಿ.ಕೆರೂರ ನೆಹರು ಅವರ ವ್ಯಕ್ತಿತ್ವ ಮತ್ತು ಸಾಧನೆಗಳ ಕುರಿತು ಮಾತನಾಡಿದರು.

ಕೆ.ಎಸ್.ಚಟ್ಟಿ, ರೇಣುಕವ್ವ ಎಸ್.ಬಿ, ತಬಸ್ಸುಮ್ ಕಾಜಿ, ತಬಸುಮ್ ನಾಗರಬಾವಡಿ ಸೇರಿದಂತೆ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ವಿದ್ಯಾರ್ಥಿಗಳಾದ ಹಬೀಬಾ ಮುಲ್ಲಾ, ಫರ್ನಾಜ ಇಲಕಲ್, ಅಲ್ಮಾಸ್ ಗುಡ್ನಾಳ, ಕುಮಾರಿ ಹಪ್ಸಸಾ ಬಿಜ್ಜರಗಿ ನಿರ್ವಹಿಸಿದರು.

# ಆರೋಗ್ಯ ಶಿಬಿರಗಳಿಂದ ಬಡವರಿಗೆ ಅನುಕೂಲ :ಸಚಿವ ಶಿವಾನಂದ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಕೋವಿಡ್ ಸಂದರ್ಭದಲ್ಲಿ ಆದ ಸಾವು ನೋವುಗಳು ಹಣವೊಂದಿದ್ದರೆ ಏನೆಲ್ಲಾ ಸಾಧಿಸಬಹುದು ಎಂಬ ಅಹಂ ದೂರು ಮಾಡಿದೆ. ಆರೋಗ್ಯದ ಮಹತ್ವ ಏನೆಂಬುದು ತಿಳಿಸಿಕೊಟ್ಟಿದ್ದು ಇಂದು ಕಾಲಕಾಲಕ್ಕೆ ತಪಾಸಣೆಗೆ ಒಳಗಾಗುವ ಮನಸ್ಥಿತಿ ಹೆಚ್ಚಿದೆ ಎಂದು ಜವಳಿ ಕಬ್ಬು ಅಭಿವೃದ್ಧಿ ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ಅಕ್ಕನಾಗಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಹಮ್ಮಿಕೊಂಡ ಚಗನಿದೇವಿ ನೇಮಿಚಂದ ಅಗರವಾಲ ಅವರ ಸ್ಮರಣಾರ್ಥ ಲೋಕನಾಥ್ ನೇಮಿಚಂದ್ರ ಅಗರವಾಲ್ ಅವರ ಪರಿವಾರ ಹಾಗೂ ಆಯುಷ್ ಆಸ್ಪತ್ರೆ ವಿಜಯಪುರ ಮತ್ತು ರಾಷ್ಟ್ರೀಯ ಬಸವ ಸೈನ್ಯ ಸಂಘಟನೆಯ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ



ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಸಂಪತ್ತುಗಳಿಗಿಂತ ಆರೋಗ್ಯ ಸಂಪತ್ತು ಇಂದು ಮನುಕುಲಕ್ಕೆ ಮುಖ್ಯವಾಗಿದೆ. ಕೋವಿಡ್ ಸಂದರ್ಭದಲ್ಲಿ ಹಲವಾರು ಜೀವಗಳನ್ನು ನಾವು ನೀವೆಲ್ಲರೂ ಕಳೆದುಕೊಂಡೆವು. ಈ ನಿಟ್ಟಿನಲ್ಲಿ ಇಂತಹ ಉಚಿತ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದರ ಮುಖಾಂತರ ಬಡವರು ರೈತರು ಕೃಷಿ ಕಾರ್ಮಿಕರಿಗೆ ಅನುಕೂಲವಾಗುತ್ತದೆ. ಇಂತಹ ಶಿಬಿರದಲ್ಲಿ ಜನರು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ನಿಟ್ಟಿನಲ್ಲಿ ಇಂತಹ ಶಿಬಿರಗಳು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿವೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಹಕಾರಿ ಮಹಾಮಂಡಲದ ನಿರ್ದೇಶಕರಾದ ಈರಣ್ಣ ಪಟ್ಟಣಶೆಟ್ಟಿ ಕರ್ನಾಟಕ ರಾಜ್ಯ ವಿಮಾ ಸಹಕಾರಿ ಮಹಾಮಂಡಳದ ಅಧ್ಯಕ್ಷ ಶಿವನಗೌಡ ಬಿರಾದಾರ ಮಾತನಾಡಿ, ಅಗರವಾಲ ಕುಟುಂಬದವರು ಹಲವಾರು ವರ್ಷಗಳಿಂದ ಅನೇಕ ಧಾರ್ಮಿಕ ಸಾಮಾಜಿಕ ಸೇವೆ ಮಾಡುತ್ತಾ ಬಂದಿದ್ದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಈ ಉಚಿತ ಆರೋಗ್ಯ ಶಿಬಿರದಲ್ಲಿ ಸುಮಾರು 500 ಕ್ಕಿಂತ ಹೆಚ್ಚು ಜನರು ತಪಾಸಣೆ ಮಾಡಿಸಿಕೊಂಡಿರುವುದು ಒಂದು ಹೊಸ ದಾಖಲೆಯಾಗಿದೆ ಎಂದು ಹೇಳಿದರು.

ಅಧ್ಯಕ್ಷತೆಯನ್ನು ಬಸವೇಶ್ವರ ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಲೋಕನಾಥ್ ಅಗರವಾಲ ವಹಿಸಿದ್ದರು. ಕಾರ್ಯಕ್ರಮದ ಸಾನಿಧ್ಯವನ್ನು ವಿರಕ್ತ ಮಠದ ಸಿದ್ದಲಿಂಗ ಶ್ರೀಗಳು ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಅತಿಥಿಗಳಾಗಿ ಬಸಣ್ಣ ಕಲ್ಲೂರ್ ಪುರಸಭೆ ಸದಸ್ಯ ನೀಲಪ್ಪ ನಾಯಕ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸುರೇಶ್ ಹಾರಿವಾಳ್ ಡಿಎಸ್‌ಪಿ ಕರುಣಾಕರಶೆಟ್ಟಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಬಸವ ಸೈನ್ಯದ ಸಂಸ್ಥಾಪಕ ಅಧ್ಯಕ್ಷರಾದ ಶಂಕರಗೌಡ ಬಿರಾದಾರ ನಿರೂಪಿಸಿದರು. ಸಂಗಮೇಶ ಓಲೇಕಾರ್ ಸ್ವಾಗತಿಸಿದರು. ರವಿ ರಾಠೋಡ್ ವಂದಿಸಿದರು.

# ದಿಂಡಿ ಉತ್ಸವದ ಯಾತ್ರಾರ್ಥಿಗಳಿಗೆ ಸಚಿವರಿಂದ ಬೀಳ್ಕೊಡುಗೆ



ಉದಯರಶ್ಮಿ ನ್ಯೂಸ್

ವಿಜಯಪುರ: ಮಹಾರಾಷ್ಟ್ರದ ಪಂಢರಪುರ ಶ್ರೀ ವಿಠ್ಠಲ-ರುಕ್ಮಿಣಿ ದರ್ಶನಕ್ಕೆ ಹೊರಟಿರುವ ಬಾಗಲಕೋಟೆ ಜಿಲ್ಲೆಯ ಗುಳೆದಗುಡ್ಡದ ಕಾರ್ತಿಕ ಪಾದಯಾತ್ರೆಯ ದಿಂಡಿ ಉತ್ಸವದ ಯಾತ್ರಾರ್ಥಿಗಳ ತಂಡ ಸಚಿವ ಎಂ. ಬಿ. ಪಾಟೀಲ ಅವರ ನಿವಾಸಕ್ಕೆ ಭೇಟಿ ನೀಡಿತು.

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಪಂಢರಪುರ ಕರ್ನಾಟಕ ವಾಸ್ಕರ ಶಿವೂರಕರ ಸೇವಾ ಮಂಡಳಿಯವರು ತಂದಿದ್ದ ಪಲ್ಲಕ್ಕಿಯನ್ನು ಸಚಿವ ಎಂ. ಬಿ. ಪಾಟೀಲ ಅವರು ಹೆಗಲ ಮೇಲೆ ಹೊತ್ತುಕೊಂಡು ಪಲ್ಲಕ್ಕಿ ಸೇವೆ ಮಾಡಿದರು.

ಈ ವೇಳೆ ಉಪಸ್ಥಿತರಿದ್ದ ಸಮಿತಿಯ ಮುಖ್ಯಸ್ಥ ಪುಂಡಲಿಕ ಮಹಾರಾಜರು ಸಚಿವರಿಗೆ ಇನ್ನೂ ಉನ್ನತ ಸ್ಥಾನ ಸಿಗಲಿ ಎಂದು ಶುಭ ಹಾರೈಸಿದರು.

ಪಾದಯಾತ್ರೆಯಲ್ಲಿ ತೆರಳುತ್ತಿದ್ದ ವಾರಕರಿಗಳಿಗೆ ಸಚಿವರು ಶುಭ ಕೋರಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಎ. ಎಸ್. ಪಾಟೀಲ(ಹೊನ್ನುಟಗಿ), ಎಸ್. ಎ. ಬಿರಾದಾರ(ಕನ್ನಾಳ), ಜಗದೀಶ ಪಾಟೀಲ, ಬಸವರಾಜ ಬಾಗೇವಾಡಿ, ಎಂ. ಬಿ. ಬಗಲಿ ಮುಂತಾದವರು ಉಪಸ್ಥಿತರಿದ್ದರು.

ಪೋಲಿಸ ಗ್ರಾಮ ವಾಸ್ತವ್ಯದಲ್ಲಿ ಎಸ್ಸೈ ರಾಘವೇಂದ್ರ ಖೋತ ಅಭಿಮತ

# ಪೋಲೀಸ ಇಲಾಖೆಯೊಂದಿಗೆ ಸಾರ್ವಜನಿಕರ ಸಹಕಾರ ಮುಖ್ಯ

ಉದಯರಶ್ಮಿ ನ್ಯೂಸ್

ಚಿಮ್ಮಡ: ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲೆಸಲು ಎಲ್ಲರೂ ಪೋಲೀಸ ಇಲಾಖೆಯೊಂದಿಗೆ ಸಹಕರಿಸಬೇಕು, ಪ್ರತಿಯೊಬ್ಬ ಪ್ರಜೆಯೂ ಸಮವಸ್ತ್ರವಿಲ್ಲದ ಪೋಲಿಸ್ ಇದ್ದಂತೆ ಎಂದು ಬನಹಟ್ಟಿ ಠಾಣಾಧಿಕಾರಿ ರಾಘವೇಂದ್ರ ಖೋತ ಹೇಳಿದರು.



ಗ್ರಾಮದ ಬಾಹುಸಾಹೇಬರ ಮಠ, ಜಾಮಿಯಾ ಮಸೀದಿ, ದುರ್ಗಾದೇವಿ ದೇವಸ್ಥಾನದ ಆವರಣ ಹಾಗೂ ಜನತಾ ಪ್ಲಾಟ್‌ನಲ್ಲಿ ಪೋಲಿಸ್ ಗ್ರಾಮ ವಾಸ್ತವ್ಯ ಕಾರ್ಯಕ್ರಮದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಜನಸಂಪರ್ಕ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು, ಗಾಂಧೀಜಿಯವರ ಆಶಯ ಪೋಲಿಸ್ ಇಲಾಖೆಯ ಧ್ಯೇಯ. ಸಮಾಜದಲ್ಲಿ ಶಾಂತಿ, ನೆಮ್ಮದಿ ತರಲು ಇಲಾಖೆ ಹಗಲಿರುಳು ಶ್ರಮಿಸುತಿದ್ದು ಇದಕ್ಕೆ ಸಾರ್ವಜನಿಕರ ಸಹಕಾರವೂ ಅಷ್ಟೆ ಅವಶ್ಯಕವಾಗಿದೆ ಎಂದು ಹೇಳಿದರು.

ಇಲಾಖೆಯಿಂದ ಸಾರ್ವಜನಿಕರಿಗೆ ದೊರೆಯುವ ಹಲವಾರು ಸೌಲಭ್ಯ, ಹೊಸ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಹಾಗೂ ಗ್ರಾಮದಲ್ಲಿ ಕೈಗೊಳ್ಳಬೇಕಾಗಿರುವ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸಲಹೆ ನೀಡಿದರು.

ಪೊಲೀಸ್ ಸಿಬ್ಬಂದಿ ಬಿ.ಐ ಹುನ್ನೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾ.ಪಂ. ಸದಸ್ಯ ಮನೋಜ ಹಟ್ಟಿ, ಪತ್ರಕರ್ತ ಇಲಾಹಿ ಜಮಖಂಡಿ ಮಾತನಾಡಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಕಾಶ ಪಾಟೀಲ, ಸದಸ್ಯರಾದ ಅಶೋಕ ಮೋಟಗಿ, ನಾಗಪ್ಪಾ ಆಲಕನೂರ, ಪೈಗಂಬರ ಮೊಪಗಾರ, ಪಿರಸಾಬ ನದಾಫ, ಪ್ರಭು ಗೋವಿಂದಗೋಳ, ರುಸ್ತುಂ ಮಾಲದಾರ, ಹನೀಫ ಚಿಕ್ಕೋಡಿ, ಶಿವಾನಂದ ದಿನ್ನಿಮನಿ, ಅಮೀರಲಿ ಸರಕಾವಸ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪೋಲಿಸ ಸಿಬ್ಬಂದಿಗಳಾದ ಪಿ.ಎಸ್ ಚಿಲ್ಲಾಪೂರ ಸ್ವಾಗತಿಸಿದರು, ಮುತ್ತಣ್ಣ ಅಜ್ಜನ್ನವರ, ಪ್ರಕಾಶ ಹಲಗತ್ತಿ ನಿರೂಪಿಸಿದರು ಭೈರು ಚೌಲಗಿ ವಂದಿಸಿದರು.

### ರಾಣಿ ಚನ್ನಮ್ಮ ವಿವಿ ಏಕ ವಲಯ ಅಂತರ ಕಾಲೇಜುಗಳ ಮಹಿಳೆಯರ ಕಬಡ್ಡಿ ಪಂದ್ಯಾವಳಿಗೆ ಚಾಲನೆ

# ಕ್ರೀಡಾಕೂಟಗಳ ಸಂಘಟನೆಗೆ ಸ್ಥಳೀಯರ ಸಹಕಾರ ಮುಖ್ಯ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ವಿಶ್ವವಿದ್ಯಾಲಯದ ಅಂತರ ಕಾಲೇಜುಗಳ ನಿರಂತರ ಕ್ರೀಡಾಕೂಟಗಳ ಸಂಘಟನೆಗೆ ಸ್ಥಳೀಯರ ಸಹಕಾರವೇ ಮುಖ್ಯವಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಅಶೋಕ ಹೆಗಡೆ ಹೇಳಿದರು.

ಪಟ್ಟಣದ ಶಾಸಕರ ಸರ್ಕಾರಿ ಮಾದರಿ ಬಾಲಕರ ಪ್ರಾಥಮಿಕ ಶಾಲಾ ಆವರಣದಲ್ಲಿ ಗುರುವಾರ ಜರುಗಿದ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಏಕ ವಲಯ ಅಂತರ ಕಾಲೇಜುಗಳ ಮಹಿಳೆಯರ ಕಬಡ್ಡಿ ಪಂದ್ಯಾವಳಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾಲೇಜಿನ ದೈಹಿಕ ನಿರ್ದೇಶಕರ ಸತತ ಪರಿಶ್ರಮ ಹಾಗೂ ಸ್ಥಳೀಯರ ಸಹಕಾರದ ಕಾರಣದಿಂದ ಒಂದೇ ವರ್ಷದ ಅವಧಿಯಲ್ಲಿ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿ ಹಾಗೂ ಅಥ್ಲೇಟಿಕ್ ಕೂಟವನ್ನು ಯಶಸ್ವಿಯಾಗಿ ಹಮ್ಮಿಕೊಂಡು ಈಗ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಲಾಗುತ್ತಿದೆ ಎಂದರು.

ಬಸವನ ಬಾಗೇವಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಎಮ್.ಬಿ.ಹೊಸಮನಿ, ಬೊಳೆಗಾಂವ ಕಾಲೇಜಿನ ಪ್ರಾಂಶುಪಾಲ ಎಸ್.ಎ.ಪತಂಗೆ ಮಾತನಾಡಿದರು.

ತಹಶೀಲ್ದಾರ ಪ್ರಕಾಶ ಸಿಂದಗಿ ಮೊಹರೆ ಹಣಮಂತ್ರಾಯ ವೃತ್ತದಿಂದ ಆರಂಭಗೊಂಡ ಪಥಸಂಚಲನಕ್ಕೆ ಚಾಲನೆ ನೀಡಿದರು. ಪಥ ಸಂಚಲನದಲ್ಲಿ 15 ಕಾಲೇಜುಗಳ ಕಬಡ್ಡಿ ಆಟಗಾರ್ತಿಯರು ಪಾಲ್ಗೊಂಡಿದ್ದರು. ನಂತರ ಪಂದ್ಯಾವಳಿಯ ಆರಂಭದಲ್ಲಿ ಮೈದಾನಕ್ಕೆ ಪೂಜೆ ಸಲ್ಲಿಸಿ ನಂತರ ಪಾರಿವಾಳಗಳನ್ನು ಹಾರಿ ಬಿಡುವುದರ ಮೂಲಕ ವಿದ್ಯುಕ್ತವಾಗಿ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.



ದೈಹಿಕ ಶಿಕ್ಷಣ ನಿರ್ದೇಶಕ ಅಶೋಕಕುಮಾರ ಜಾಧವ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎಲ್.ಡಿ.ಮುಲ್ಲಾ, ಕಾಲೇಜು ಪ್ರಾಂಶುಪಾಲರಾದ ಅಮೀತ ಮಿರ್ಜಿ, ಎನ್.ಎಸ್.ಝುಳಕಿ, ರಾಜಮಾನೆ, ಪಟ್ಟಣ ಪಂಚಾಯಿತಿ ಸದಸ್ಯರಾದ ರಮೇಶ ಮಸಬಿನಾಳ, ಶಾಂತಯ್ಯ ಜಡಿಮಠ, ಸುಮಂಗಲಾ ಸೇಬೆನವರ, ಉಮೇಶ ರೂಗಿ, ಕಾಶೀನಾಥ ಬಜಂತ್ರಿ, ಸಿಂಧೂರ ಡಾಲೇರ, ಅಧಿಕ್ಷಕ ಜಗನ್ನಾಥ ಸಜ್ಜನ, ಪ್ರಕಾಶ ಮಲ್ಲಾರಿ, ಕಾಶೀನಾಥ ತಳಕೇರಿ, ರಾಜು ಕಾಖಂಡಕಿ, ರಾಘವೇಂದ್ರ ಗುಡಿಮನಿ, ಪಿ.ಸಿ.ತಳಕೇರಿ, ಸುಭಾಸ್ ಜಾಧವ, ಫಯಾಜ್ ಕಲಾದಗಿ, ಉಪನ್ಯಾಸಕರುಗಳಾದ ದ್ರಾಕ್ಷಾಯಣಮ್ಮ, ಪ್ರೇಮಕುಮಾರಿ, ಎಸ್.ಬಿ.ಜಾಲವಾದಿ, ಅಕ್ರಮ್ ಪಾಷಾ ಸೇರಿದಂತೆ ವಿವಿಧ ಕಾಲೇಜುಗಳ ಕ್ರೀಡಾಪಟುಗಳು ಇದ್ದರು.

# ತಾಲೂಕು ಅಧ್ಯಕ್ಷರಾಗಿ ನಾಗರಾಜ ನೇಮಕ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ತಾಲೂಕಿನ ಇಣಚಗಲ್ ಗ್ರಾಮದ ನಾಗರಾಜ ಕನ್ನೊಳ್ಳಿ ಅವರನ್ನು ಅಖಿಲ ಕರ್ನಾಟಕ ನಾಯಕ ತಳವಾರ ಜನಾಂಗದ ಹಿತರಕ್ಷಣಾ ಸಮಿತಿಯ ತಾಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ರಾಜ್ಯಾಧ್ಯಕ್ಷ ಅಮಿತ ಎ.ಕೆ ಹಾಗೂ ಪ್ರಧಾನ ಕಾರ್ಯದರ್ಶಿ ಶಂಕರ ಬಿ.ಜಿ ನೇಮಕ ಮಾಡಿ ಆದೇಶಿಸಿದ್ದು ಸಮಾಜದ ಹಿತದೃಷ್ಠಿಯಿಂದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಮತ್ತು ಸಮಾಜದ ಜಾಗೃತಿಗಾಗಿ ಈ ಆಯ್ಕೆ ಮಾಡಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

# ನ.18ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ವಿಜಯಪುರ: 110 ಕೆವಿ ದೇವರಹಿಪ್ಪರಗಿ–ಸಿಂದಗಿ ವಿದ್ಯುತ್ ಪ್ರಸರಣ ಜೋಡಿ ಮಾರ್ಗದಲ್ಲಿ ವಾಹಕಗಳ ಮತ್ತು ಗೋಪುರಗಳ ಬದಲಾವಣೆ ಕಾಮಗಾರಿ ಕೈಗೊಂಡಿರುವುದರಿಂದ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ 33 ಕೆವಿ ಗೋಲಗೇರಿ ಹಾಗೂ 33 ಕೆವಿ ಕಲಕೇರಿ ಮತ್ತು 11 ಕೆವಿ ಬ್ಯಾಕೋಡ ಹಾಗೂ 11 ಕೆವಿ ಬಂದಾಳ ಐಪಿ ಮಾರ್ಗಗಳಲ್ಲಿ ನವೆಂಬರ್ 18ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕ–ರಿಸುವಂತೆ ಇಂಡಿ ಹೆಸ್ಕಾಂನ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಸಾಮಾಜಿಕ ಬದಲಾವಣೆಯ ಹರಿಕಾರ ಚನ್ನಬಸವಣ್ಣ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: 12ನೇ ಶತಮಾನದ ಅಸಂಖ್ಯಾತ ಶರಣರಲ್ಲಿ ಚನ್ನಬಸವಣ್ಣನವರು ಸಾಮಾಜಿಕ ಬದಲಾವಣೆಯ ಹರಿಕಾರರಾಗಿ “ಚಿನ್ಮಯಜ್ಞಾನಿ’ ಎನಿಸಿದ್ದಾರೆ ಎಂದು ಶರಣಸಂಗಮ ಸೇವಾ ಸಮೀತಿ ತಾಲ್ಲೂಕು ಅಧ್ಯಕ್ಷ ಸಂಗಪ್ಪ ತಡವಲ್ ಹೇಳಿದರು.




ಪಟ್ಟಣದ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಚನ್ನಬಸವಣ್ಣನವರ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಅನುಭವ ಮಂಟಪದ ಎರಡನೆಯ ಶೂನ್ಯ ಪೀಠಾಧೀಶರಾಗಿದ್ದ ಚನ್ನಬಸವಣ್ಣ ಪ್ರತಿಯೊಂದು ವಚನಗಳಿಗೆ ಅಂತಿಮವಾಗಿ ಒಪ್ಪಿಗೆಯನ್ನು ಕೊಡುವ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಅಂತೆಯೇ ತಮ್ಮ 21ನೇ ವರ್ಷದಲ್ಲಿ ಖಡ್ಗ ಹಿಡಿದು ಕನ್ನಡ ಶರಣ ಸಾಹಿತ್ಯವನ್ನು ರಕ್ಷಣೆ ಮಾಡುವುದರ ಮೂಲಕ ಷಟಸ್ಥಲಜ್ಞಾನಿ ಎನಿಸಿದ್ದರು. ಇವರ ಜೀವಿತ ಕಾಲಾವಧಿ ತೀರಾ ಕಡಿಮೆ. ಬದುಕಿದ್ದು ಕೇವಲ ಇಪ್ಪತ್ತನಾಲ್ಕು ವರ್ಷಗಳು ಮಾತ್ರ. ಕೊನೆಗೆ ಉಳವಿಯಲ್ಲಿಯೇ ಲಿಂಗೈಕ್ಯರಾದರು ಎಂದು ಚನ್ನಬಸವಣ್ಣನವರ ಹಿರಿಮೆಯ ಕುರಿತು ಮಾಹಿತಿ ನೀಡಿದರು.

ರಾಣಿ ಕುಂಬಾರ ಹಾಗೂ ಸಂಗಡಿಗರು ವಚನಪಠಣ ಮೂಲಕ ಪ್ರಾರ್ಥನೆ ಪ್ರಸ್ತುತಪಡಿಸಿದರು. ನಿಂಗು ಜಡಗೊಂಡ ಪ್ರಾಸ್ತಾವಿಕವಾಗಿ ಮಾತನಾಡಿ ಶರಣರ ವಚನಗಳನ್ನು ವಾಚಿಸಿದರು.

ಚುಟುಕು ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಬಿ.ಸಿ.ಹಿರೇಮಠ, ವಚನ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಜೆ.ಆರ್.ಬಿರಾದಾರ, ಚನ್ನಪ್ಪ ದೇಸಾಯಿ, ಬಸವರಾಜ ಕುಂಬಾರ, ಕಾಶೀನಾಥ ರಾಮಗೊಂಡ, ಗೋಲ್ಲಾಳ ಬಿರಾದಾರ, ಬಸಪ್ಪ ಕುಂಬಾರ, ಮಲ್ಲಪ್ಪ ಹಳಿಮನಿ, ಹಣಮೇಶ ನಂದ್ಯಾಳ, ಕಾಸಪ್ಪ ಕುಂಬಾರ, ಬಸವರಾಜ ದೊಡಮನಿ ಸೇರಿದಂತೆ ಮಕ್ಕಳು ಇದ್ದರು.

# ಕಾವ್ಯರಶ್ಮಿ

– ಶೈಲಾ ಗೋವಿಂದ್
(“ನಮ್ಮ ಕಥಾ ಅರಮನೆ” ಬರಹಗಾರರು)



## ಸಿರಿಗನ್ನಡ

ಹರಿಯುವ ನದಿಯ
ಝುಳು ಝುಳು ನಾದದಲಿ
ಬೀಸುವ ಗಾಳಿಯ
ಪಿಸುಗುಡುವ ಗಾನದಲಿ
ಕೇಳುತಿದೆ ಸವಿ ಸವಿ ಕನ್ನಡ... ಕನ್ನಡ

ಹಸು ಕಂದನ
ತೊದಲುವ ತುಟಿಯಲಿ
ಇಂಪಾಗಿ ಹಾಡುವ
ಕೋಗಿಲೆಯ ಗಾನದಲಿ
ಜೇನಿನ ಹೊಳೆಯಾಗಿ ಕನ್ನಡ... ಕನ್ನಡ

ಹೆಣ್ಣಿನ ಹಣೆಯ
ಹೊಳೆವ ಸಿಂಧೂರದಲಿ
ಸೌಭಾಗ್ಯ ಸಂಕೇತ
ಹರಿದ್ರಾ ಕುಂಕುಮಗಳಲಿ
ಬೆರೆತು ನಲಿಯುತ್ತಿದೆ ಕನ್ನಡ... ಕನ್ನಡ

ಅರಳುವ ಮೊಗ್ಗಿನ
ಬಿರಿಯುವ ಅಂದದಲಿ
ಶ್ರೀ ಗಂಧದದಲಿ ಬೆರೆತ
ಮಧುರ ಸುಗಂಧದಲಿ
ಪರಿಮಳವ ಬೀರುತ್ತಿದೆ ಕನ್ನಡ... ಕನ್ನಡ




ಉಸಿರಲ್ಲಿ ಉಸಿರಾದ
ನುಡಿಯ ಮಾಧುರ್ಯದಲಿ
ತಲೆಯೆತ್ತಿ ನಡೆವ
ಪ್ರತಿಯೊಬ್ಬ ಕನ್ನಡಿಗನಲಿ
ಹೃದಯದ ಪ್ರತಿ ಮಿಡಿತವೂ ಕನ್ನಡ...
ಕನ್ನಡ

# ಅವಳ ನಿರ್ಣಯ

# ಭಾವರಶ್ಮಿ



– ಹೇಮಲತಾ
(“ನಮ್ಮ ಕಥಾ ಅರಮನೆ” ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**



ಮನೆ ಫೋನ್ ರಿಂಗಣಿಸಿದಾಗ ರಾಕೇಶ್ ಅಲ್ಲೇ ಇದ್ದವನು “ಹಲೋ” ಎಂದ. ಅತ್ತ ಕಡೆಯಿಂದ ಬಿಕ್ಕುವ ಸದ್ದು. ಅಸಹಾಯಕ ದನಿಯಲ್ಲಿ ಎಷ್ಟೋ ಹೊತ್ತಾದ ಮೇಲೆ “ ಅಣ್ಣಾ” ಎಂದಾಗ ತಬ್ಬಿಬ್ಬಾದ. ಅದು ತನ್ನ ಗಂಗಿ ರಾಧ ಇರಬಹುದೇ ಎಂಬ ಅನುಮಾನ ಮನದ ದೂರದ ಭಾವ ಹೇಳಿತು. “ರಾಧಾ ಹೇಳಮ್ಮ ಏನಾಯ್ತು” ಎಂದು ಕೇಳುತ್ತಿರುವಾಗಲೇ ದೊಡ್ಡಣ್ಣ ರಾಘವ, ಅವನ ಹೆಂಡತಿ ಗೌರಿ, ಚಿಕ್ಕಣ್ಣ ರಾಜೇಶ್ ಅವನ ಸುಶೀಲ ‘ರಾಧ’ ಎನ್ನುವ ಮಾತು ಕೇಳಿ ನಡು ಮನೆಗೆ ಧಾವಿಸಿದರು. ಎಲ್ಲರ ಮುಖದಲ್ಲೂ ಅಸಹನೆ, ಕೋಪ ರೋಷದ ಮಿಶ್ರ ಭಾವಗಳು.

ಅಷ್ಟರಲ್ಲಿ ರಾಕೇಶ “ಆಯ್ತು ಬಾಮ್ಮ ಸಂಜೆ ನಾಕು ಗಂಟೆಗೆ ಬಾ” ಎಂದು ಫೋನಿಟ್ಟಾಗ ಅಷ್ಟೂ ಜೊತೆ ಕಂಗಳು ಅವನನ್ನೇ ದಿಟ್ಟಿಸಿದವು. ಹೂತು ಹೋಗುತ್ತಿದ್ದ ಗಂಟಲನ್ನು ಸರಿ ಪಡಿಸಿಕೊಂಡು “ ರಾಧ ನಮ್ಮನ್ನು ನೋಡಲು ನಾಳೆ ಸಂಜೆ ಬರ್ತಿದಾಳಂತೆ” ಎಂದಾಗ ಸಿಡಿಲು ಗುಡುಗು ಮಿಂಚು ಮಳೆ ಎಲ್ಲಾ ಒಟ್ಟಿಗೆ ಶುರುವಾಯ್ತು. ಅವಳನ್ನು ಮನೆ ಒಳಗೇ ಸೇರಿಸ ಬಾರದೆಂಬಲ್ಲಿಂದ ಹಿಡಿದು ಹೇಳದೇ ಕೇಳದೇ ಬೆಂಗಳೂರಿನಲ್ಲಿ ಮೂರನೆ ವರ್ಷ ಓದುತ್ತಿದ್ದಾಗ ಜಾರ್ಖಂಡ್ ಮೂಲದ ಸಹಪಾಠಿ ಜೊತೆ ಓಡಿ ಹೋದವಳ ಜೊತೆ ಎಂತಹ ಸಂಬಂಧ? ಈ ದಿನದವರೆಗೂ ಪೂರ್ತಿ ಸಂಬಂಧ ಕಳಚಿಕೊಂಡು ದೂರ ಇದ್ದವಳ ಅಗತ್ಯ ಏನಿದೆ. ಇಲ್ಲಿ ಹೆಜ್ಜೆ ಇಡಕೂಡದು ಎಂದು ಠರಾವನ್ನು ಪಾಸ್ ಮಾಡುತ್ತ ಇದ್ದರೇ ರಾಕೇಶನ ಹೆಂಡತಿ ಗೌರಿಯ ಮನಸ್ಸು ಬೇರೇನೋ ಯೋಚಿಸುತ್ತಿತ್ತು.

ಒಬ್ಬಳೇ ಮುದ್ದಿನ ಮಗಳು. ಓದುವುದರಲ್ಲೂ ಜಾಣೆ. ಅಮ್ಮನನ್ನು ಹುಟ್ಟಿದಾಗಲೇ ಕಳೆದು ಕೊಂಡಿದ್ದವಳು. ಅವಳನ್ನು ಮಗಳಂತೆ ಅಣ್ಣ ಅತ್ತಿಗೆಯರೆಲ್ಲಾ ಕಾಣುತ್ತಿದ್ದರು. ಇಂಜನಿಯರಿಂಗ್ ಓದಲು ರಾಧ ಬಯಸಿದಾಗ ಎಲ್ಲರನ್ನೂ ಅವ–ರಿಷ್ಟಕ್ಕೆ ವಿರೋಧವಾಗಿ ಒಪ್ಪಿಸಿ ಅಸಮಾಧಾನಕ್ಕೆ ಕಾರಣವಾಗಿದ್ದಳು. ಪ್ರತಿ ರಜೆಗೂ ಹಿಂದಿನ ದಿನವೇ ಓಡಿ ಬರುತ್ತಿದ್ದಳು. ವಾಪಸ್ ಹೋಗುವಾಗ ಮುಖ ಸಣ್ಣದಾಗುತ್ತಿತ್ತು. ಉತ್ತಮ ಅಂಕಗಳನ್ನೂ ತರುತ್ತಿದ್ದಳು. ಮೂರನೇ ವರ್ಷಕ್ಕೆ ಬಂದಾಗ ಮೊದಲಿನಂತೆ ಬರುತ್ತಿರಲಿಲ್ಲ. ಓದಲು ಸಮಯವೇ ಸಾಕಾಗದಂತಾಗಿದೆ ಎನ್ನುತ್ತಿದ್ದಳು. ಬಂದರೂ ಏನೋ ಚಡಪಡಿಕೆ, ವಾಪಸ್ ಹೋಗುವ ತುಡಿತ. ಅಲಂಕಾರದಲ್ಲಿ ನವೀನತೆ, ಬೆಡಗು ಬಿನ್ನಾಣ. ಪ್ರೀತಿಸಿದವನ ಜೊತೆಗೆ ವಿದ್ಯಾಭ್ಯಾಸವನ್ನೂ ಧಿಕ್ಕರಿಸಿ, ಮನೆಯಲ್ಲಿ ಒಪ್ಪುವುದಿಲ್ಲವೆಂದು ಪೋಸ್ಟ್ ಬರೆದು ಅದು ಮನೆಗೆ ತಲುಪುವುದರ ಒಳಗೇ ಓಡಿ ಹೋಗಿದ್ದಳು. ವರ್ಷದೊಳಗೆ ಮಾವ ಅವಳ ಕೊರಗಿನಲ್ಲೇ ತೀರಿ ಹೋಗಿದ್ದರು. ತಾವುಗಳೂ ಹೆಚ್ಚು ಕಡಿಮೆ ಅವಳನ್ನು ಮರೆತದ್ದಾಗಿತ್ತು. ಈಗೇಕೆ ಬರುತ್ತಿದ್ದಾಳೆ? ಎಲ್ಲಾ ಸರಿ ಇದ್ದರೇ ಅಳು ಯಾಕೆ? ಏನಾಗಿದ್ದೀತು? ಎಲ್ಲರ ತಲೆ ಗೋಜಾಲಾಗಿತ್ತು.

ಭಾನುವಾರ ಸಂಜೆ ರಾಧ ಬಂದಾಗ ಇಡೀ ಮನೆ ಬಿಗುವಿನ ವಾತಾವರಣದಿಂದ ಕೂಡಿತ್ತು. ಒಳಗೆ ಸಹ ಯಾರೂ ಕರೆಯಲಿಲ್ಲ. ಅವಳ ಕೈಯಲ್ಲಿ ನಾಲ್ಕು ವರ್ಷದ ಕಪ್ಪೆಂದೇ ಹೇಳಬಹುದಾದ ಹೆಣ್ಣು ಮಗು. ರಸದಾಳೆ ಕಬ್ಬಿನಂತಿ–ದ್ದ ರಾಧ ಕುಗ್ಗಿ ಹೋಗಿದ್ದಳು. ಸೊಂಪಾದ ತಲೆ ಕೂದಲು, ಮೈ ಕಾಲ ಕಾಲಕ್ಕೆ ತಕ್ಕ ಆರೈಕೆಯಿಲ್ಲದೆ ಸೊರಗಿ ಹೋಗಿತ್ತು. ವಿಶಾಲವಾದ ಕಂಗಳಲ್ಲಿ ವಿಶಾದ ಮಡುಗಟ್ಟಿತ್ತು. ತನ್ನವರನ್ನು ಐದು ವರ್ಷಗಳ ನಂತರ ನೋಡಿ ಭಾವೋದ್ವೇಗಕ್ಕೆ ಒಳಗಾದಳು. ಅಳುತ್ತಾ ತನ್ನ ಕತೆ ಹೇಳಿಕೊಂಡಳು. ಅವಳ ಜೊತೆ ಓದುತ್ತಿದ್ದ ರಾಮ್ ಜಾರ್ಖಂಡ್ ರಾಜ್ಯದ ಯುವಕ. ಮೂಲ ಹೆಸರು ಬರ್ಸಾ. ಅದನ್ನು ಶಾಲೆಗೆ ಸೇರಿಸುವಾಗ ರಾಮ್ ಎಂದು ಬದಲಾಯಿಸಿದ್ದರಂತೆ. ಹುಡುಗ ಕಪ್ಪಗಿದ್ದರೂ ಲಕ್ಷಣವಂತ. ತಕ್ಕ ಮಟ್ಟಿಗೆ ಜಾಣ ಸಹ. ನಾಟಕಗಳಲ್ಲಿ ಪಾರ್ಟ್ ಮಾಡುತ್ತಾ ಆಟಗಳಲ್ಲಿ ಎದುರಾಳಿಯಾಗಿ ಆಡುತ್ತಿದ್ದಾಗ ಪ್ರೀತಿ ಮೊಳಕೆಯೊಡೆದಿತ್ತಂತೆ. ಪ್ರೀತಿಯ



ಅಲೆಯಲ್ಲಿ ಕೊಚ್ಚಿ ಹೋಗಿದ್ದರು. ದೇಗುಲದಲ್ಲಿ ಸರಳವಾಗಿ ವಿವಾಹ ಆಯಿತು. ರಾಮ್ ರೂಮ್ ನಲ್ಲೇ ವಾಸ. ತಿಂಗಳ ನಂತರ ರಾಮ್ ನ ತಾಯಿ ಸತ್ತು ಹೋಗಿದ್ದರಿಂದ ರಾಮ್ ಓದು ನಿಲ್ಲಿಸಿ ತನ್ನೂರಿಗೆ ವಾಪಸ್ಸಾಗಲು ನಿರ್ಧರಿಸಿದಾಗ ರಾಧ ಸಹ ಹೊರಟಳು. ಅವನದು ಒಂದು ಕುಗ್ರಾಮ ಕಾಡಿನ ಆಸರೆಯಲ್ಲಿತ್ತು. ಅಲ್ಲಿ ಯಾರೂ ಇವಳ ಇರುವಿಕೆಯನ್ನೇ ಗುರುತಿಸಲಿಲ್ಲ. ಬದಲಿಗೆ ಅಸಹನೆ ಕೋಪದ ದೃಷ್ಠಿ ಎದುರಿಸಿದಳು. ಹೆಚ್ಚಿನವರು ಅವಿದ್ಯಾವಂತರು. ಅನ್ಯ ಜಾತಿಯ ಹುಡುಗಿಯೊಡನೆ ಇವನ ಸಂಬಂಧ ಪಂಚಾಯ್ತಿ ತನಕ ಕೊಂಡೊಯ್ದಿತು. ರಾಮ್ ನ ಈ ತಪ್ಪಿಗೆ ಶಿಕ್ಷೆಯೂ ಸಿಕ್ಕಿ ತಮ್ಮದೇ ಕುಲದ ಹೆಣ್ಣನ್ನು ಮರುದಿನವವೇ ಮದುವೆಯಾಗುವ ತೀರ್ಪಾಯ್ತು. ಇವರಿಬ್ಬರ ಮದುವೆಯನ್ನು ಅಲ್ಲಿನವರು ಮದುವೆ ಎಂದೇ ಪರಿಗಣಿಸಲಿಲ್ಲ. ರಾಮ್ ಸಹ ಅವರ ತೀರ್ಪನ್ನು ಧಿಕ್ಕರಿಸಿದರೇ ತಮ್ಮಿಬ್ಬರ ಜೀವಕ್ಕೇ ಕುತ್ತೆಂದು ಹೇಳಿದ. ಅವರ ಸಂಪ್ರದಾಯದಂತೆ ರಾಮ್ ನ ಮದುವೆ ಅದೇ ಬುಡಕಟ್ಟಿನ ಹುಡುಗಿ ಜೊತೆಯಾದಾಗ ರಾಧಳಿಗೆ ಕಣ್ಣೀರಷ್ಟೇ ಉಳಿಯಿತು. ಮೈ ತುಂಬಾ ಹಚ್ಚೆ ಹಾಕಿದ್ದ ಹೆಂಗಸರೂ ಇವಳ ಅಹವಾಲನ್ನು ಕೇಳಲಿಲ್ಲ. ನಂತರ ರಾಮನನ್ನು ಇವಳು ಕಾಣುವುದೇ ಕಷ್ಟ ಎನಿಸಿತು. ಅವರು ದಯೆಯಿಟ್ಟು ಹಾಕುತ್ತಿದ್ದ ಅವರ ಊಟ ಸ್ವಲ್ಪವೂ ರಾಧಾಳಿಗೆ ಸೇರುತ್ತಿರಲಿಲ್ಲ

ಅವಳು ಗರ್ಭಿಣಿಯೆಂದು ತಿಳಿದಾಗ ಜೀವಂತ ಉಳಿಯುವುದೇ ಕಷ್ಟವಾಯ್ತು. ಪಡಬಾರದ ಪಾಡು ಪಟ್ಟು ರಾಧ ರಾಂಚಿ ಸೇರಿ, ಮೈ ಮೇಲಿದ್ದ ಉಂಗುರ ಸರ ಮಾರಿ ಬೆಂಗಳೂರಿಗೆ ವಾಪಸ್ಸಾಗಿ ಅವಳ ಗೆಳತಿಯ ಜೊತೆ ಇರತೊಡಗಿದಳು. ಅಲ್ಲೇ ಹೆಣ್ಣು ಮಗುವೂ ಆಯ್ತು. ಅಂಗಡಿಯಲ್ಲಿ ಸೇಲ್ಸ್ ಗರ್ಲ್ ಆಗಿ ರಾಧ ದುಡಿಯುತ್ತಿದ್ದಳು. ಮುಂದೆ ಗೆಳತಿಯ ವಿದ್ಯಾಭ್ಯಾಸ ಮುಗಿದು ಊರಿಗೆ ವಾಪಸ್ಸಾದ ಮೇಲೆಯೂ ಒಂದು ವರ್ಷ ಅಲ್ಲೇ ಇದ್ದಳು. ನಂತರ ಅಂಗಡಿಯಾತ ತನ್ನ ರಾಜ್ಯಕ್ಕೆ ವಾಪಸ್ಸಾದ. ಬೇರೆ ಕೆಲಸ ಸಿಗಲಿಲ್ಲ. ಜೀವನ ನಡೆಸುವುದು ದುರ್ಭರವಾಯ್ತು. ವಿಧಿಯಿಲ್ಲದೇ ನಾಲ್ಕು ವರ್ಷದ ಮಗುವಿನ ಜೊತೆಗೆ ತವರಿಗೆ ಬಂದಿದ್ದಳು. ಎಲ್ಲರೂ ಇವಳ ಕತೆಯನ್ನು ಮೌನವಾಗಿ ಕೇಳಿದರು ಅಷ್ಟೇ! ತನ್ನನ್ನು ಕೊಂಚ ಸಹ ಸಂತೈಸದೇ ವಿಗ್ರಹಗಳಂತೆ ಕೂತವರತ್ತ ರಾಧ ತಿರಸ್ಕಾರದ ನೋಟ ಬೀರಿ ಹೊರ ನಡೆದಳು.

ತಮ್ಮೊಂದಿಗೆ ಇರಿಸಿಕೊಳ್ಳುವುದಿರಲಿ ಮಗುವಿಗೆ ಒಂದು ಲೋಟ ಹಾಲೂ ಕೊಡದೇ ಹೊರಹಾಕಿದ್ದು ತುಂಬಾ ದು:ಖವಾಗಿತ್ತು. ಎಲ್ಲರೂ ಅವರವರ ಕೋಣೆ ಸೇರಿದ ಮೇಲೆ ಗೌರಿ ಮತ್ತು ರಾಕೇಶ್ ಸ್ಕೂಟರ್ ಏರಿ ಅವಳನ್ನು ಹುಡುಕಿ ಹೊರಟರು. ಸೋತ ಕಾಲ್ಗಳನ್ನೆಳೆಯುತ್ತಾ ನಡೆಯುತ್ತಿದ್ದ ತಂಗಿಯನ್ನು ಕಂಡು ಸ್ಕೂಟರ್ ನಿಲ್ಲಿಸಿ ಅವಳ ಕೈಗೆ ಪರ್ಸ್ ಒಂದನ್ನು ಕೊಟ್ಟು, ಇದರಲ್ಲಿ ಐವತ್ತು ಸಾವಿರ ಹಣವಿದೆ, ನಿನ್ನ ಕಷ್ಟಕ್ಕೆ ಬಳಸಿಕೋ ನಾನು ಸೈಟ್ ಗೆ ಅಡ್ವಾನ್ಸ್ ಕೊಡಲು ಜೋಡಿಸಿದ್ದ ಹಣ ಎಂದು ನುಡಿದು ಮಾರುತ್ತರ ಬರುವುದರೊಳಗೆ ಹೋಗೇ ಬಿಟ್ಟರು. “ನಿಮ್ಮ ಭಿಕ್ಷೆ ನನಗೆ ಬೇಡ, ನನ್ನ ಮಗಳಿಗೊಂದು ತುಂಬು ಕುಟುಂಬದ ಭದ್ರ ಭಾವನೆ ಸಿಗಲೆಂದು ಬಂದೆ” ಎನ್ನುವಷ್ಟು ಒತ್ತಡ ಬಂದರೂ ರಾಧ ಮಗಳಿಗಾಗಿ ನಿರ್ಲಜ್ಜಳಂತೆ ಆ ಹಣ ಹಿಡಿದು ಹೊರಟವಳು. ನಂತರ ತಲುಪಿದ್ದು ಸಣ್ಣ ಪಟ್ಟಣವೊಂದಕ್ಕೆ. ಅಲ್ಲಿಂದ ಅವಳ ಜೀವನದ ಎರಡನೇ ಮಜಲು ಪ್ರಾರಂಭವಾಗಿತ್ತು. ಸಿಟಿಯಲ್ಲಿ ಬ್ಯೂಟಿ ಪಾರ್ಲರ್ ಕೋರ್ಸ್ ಕಲಿತು ಆ ಊರಲ್ಲಿ ಅಂಗಡಿ ತೆರೆದಳು. ಕ್ರಮೇಣ ಸಂಪಾದನೆಯೂ ಜೋರಾಗಿತ್ತು. ಮಗಳು ಹೈ ಸ್ಕೂಲ್ ಮುಗಿಸಿದಾಗ ನಗರದಲ್ಲಿ ನೆಲೆ ನಿಂತು ದೊಡ್ಡ ಪಾರ್ಲರ್ ತೆಗೆದಳು. ಕಾಲೇಜ್ ಸೇರಿದ ಮಗಳು ಚೆನ್ನಾಗಿ ಓದುತ್ತಿದ್ದಳು. ತನ್ನ ಶ್ರಮದಿಂದ ರಾಧಳ ಜೀವನ ಮಟ್ಟ ಸುಧಾರಿಸಿತ್ತು.

ಸಂಜೆ ಎಂಟು ಗಂಟೆಗೆ ಪಾರ್ಲರ್ ಮುಚ್ಚಿ ಮನೆಯ ತಿರುವಿಗೆ ಬಂದಾಗ ಅಪಾರ್ಟ್ ಮೆಂಟ್ ನ ತನ್ನ ಮನೆಯಲ್ಲಿ ದೀಪ ಹಾಕಿರದೇ ಇದ್ದಿದ್ದು ನೋಡಿ ಮಗಳ ಸೇಫ್ಟಿ ಬಗ್ಗೆ ಗಾಬ–ರಿಯಾಯ್ತು. ತಾನು ಬಂದ ಎಷ್ಟೋ ಹೊತ್ತಿಗೆ ಬಂದ ಮಗಳು ತನ್ನೊಂದಿಗೆ ಮತ್ತೊಬ್ಬನನ್ನು ಕರೆತಂದಿದ್ದಳು. ಅವನು ಬೇರಾರೂ ಆಗಿರದೇ ರಾಮ್ ಆಗಿದ್ದ. ಅಮ್ಮನ ಮುಖವನ್ನೇ ಆಳವಾಗಿ ಪ್ರತಿಕ್ರಿಯೆಗಾಗಿ ನೋಡಿ ನಡುಮನೆಯ ದಿವಾನ್ ಮೇಲೆ ಆತನನ್ನು ಮೆಲ್ಲನೆ ಮಲಗಿಸಿದಳು. ರಸ್ತೆ ಅಪಘಾತಕ್ಕೆ ಒಳಗಾದವನನ್ನು ಕಂಡು ಆಸ್ಪತ್ರೆಯಲ್ಲಿ ಸೇರಿಸಿ ಈಗ ಕರೆತಂದಿದ್ದಳು. ಮೊದಲೆಲ್ಲಾ ಅಪ್ಪನ ಬಗ್ಗೆ ಕೇಳಿದಾಗ ಉತ್ತರವಿಲ್ಲದೇ, ಒಮ್ಮೆ ಅಮ್ಮನ ಹಳೇ ಟ್ರಂಕ್ ನಲ್ಲಿ ಸಿಕ್ಕ ಫೋಟೊ ಮನುಷ್ಯ ಮತ್ತು ಈತ ಒಬ್ಬನೇ ಎಂದು ಗ್ಯಾರಂಟಿಯಾಗಿ ತಂದೆಯನ್ನು ಕರೆದುಕೊಂಡು ಬಂದಿದ್ದಳು.

ರಾಧಳಿಗೆ ಅವನು ಮಾಡಿದ ಅನ್ಯಾಯದ ಬಗ್ಗೆ ಇನ್ನೂ ಸಿಟ್ಟಿತ್ತು. ಬಿಲ್ಕುಲ್ ಅವನನ್ನು ತಮ್ಮ ಜೊತೆ ಇರಿಸಿಕೊಳ್ಳಲು ಒಪ್ಪದಿದ್ದಾಗ ಮಗಳು

ತೀಕ್ಷ್ಣವಾಗಿ” ತನ್ನ ಹೆಂಡತಿಯನ್ನು ಕಳೆದುಕೊಂಡು ನಿನ್ನನ್ನು ಅರಸುತ್ತಾ ಬಂದವನ ಬಗ್ಗೆ ನಿನಗೆ ಗೌರವವಿಲ್ಲವೇ? ಆಗಲಿ, ಹೇಗೂ ನನಗೆ ಕೆಲಸ ಸಿಕ್ಕಿದೆ. ನಾನೂ ಅಪ್ಪ ಒಟ್ಟಿಗೆ ನನಗೆ ಕೊಡುವ ಕ್ವಾರ್ಟರ್ಸ್ ನಲ್ಲಿರುತ್ತೇವೆ. ನಮ್ಮ ಅಗತ್ಯವಿದೆ ಎಂದು ನಿನಗನಿಸಿದ ದಿನ ನೀನೇ ಬಾ. ಅಪ್ಪನ ಪ್ರೀತಿಯ ನನ್ನ ಹಪಹಪಿ ಬಗ್ಗೆ ನಿನಗೇನು ಗೊತ್ತು” ಎಂದು ಖಾರವಾಗಿ ನುಡಿದು ಬೆನ್ನು ತಿರುಗಿಸಿ ನಡೆದವಳತ್ತ ರಾಧ ಬೆಪ್ಪಾಗಿ ನೋಡಿದಳು.